# ಕುವೆಂಪು ಕಾದಂಬರಿಗಳಲ್ಲಿ ದಲಿತ ಸಂವೇದನೆ

# Kuvempu Kadambarigalalli Dalitha Sumvedane

**Dr. K Anjanappa**
Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ಆಧುನಿಕ ಕನ್ನಡ 'ಸಾಹಿತ್ಯ'ದ ವಿವಿಧ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು. ಕಾದಂಬರಿ ಒಂದು ಜನಾಂಗದ ಸಮಸ್ತ ಬದುಕನ್ನು ಒಳಗೊಂಡಿದ್ದರೂ ಆ ಜನಾಂಗ ಇತರ ಜನಾಂಗದ ಜೊತೆಗೆ ಇರಿಸಿಕೊಂಡ ಸಂಬಂಧಗಳು, ಇತರ ಜನಾಂಗಗಳ ಬಗೆಗಿನ ಭಾವನೆಗಳು ಸಹಜವಾಗಿಯೇ ಅಭಿವ್ಯಕ್ತಗೊಂಡಿರುತ್ತವೆ. ಸಾಹಿತ್ಯದ ಮೂಲಭೂತ ಕಾಳಜಿ ಒಂದು ಜನಾಂಗದ ಸಮಗ್ರ ಬದುಕಿನ ಚಿತ್ರಣವನ್ನು ವರದಿಯಂತೆ ಕೊಡುವುದಲ್ಲ ಬದಲಾಗಿ ಆ ಜನಾಂಗದ ಸಮಸ್ಯೆಗಳನ್ನು, ನೋವುಗಳನ್ನು ಮಾನವೀಯ ನೆಲೆಯಲ್ಲಿ ಅರ್ಥೈಸುವ ಪರಿಹರಿಸುವ ನಿಟ್ಟಿನಲ್ಲಿ ಅವರ ಕಾಳಜಿಗಳು ವ್ಯಕ್ತವಾಗುತ್ತವೆ. ಇದೆಲ್ಲವೂ ಆಯಾ ಕಾಲದ ಕಾದಂಬರಿಕಾರನ ಅನುಭವ ಗ್ರಹಿಕೆಯ ಸೃಷ್ಟಾತ್ಮಕ ಸಾಮರ್ಥ್ಯದ ಹಿನ್ನೆಲೆಯಲ್ಲಿ ಒದಗಿ ಬರುವಂತದಾಗಿದೆ. ಭಾರತೀಯ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಶೋಷಣೆಗೆ ಒಳಗಾದ ದಲಿತರನ್ನು ಹೊರತುಪಡಿಸಿದ ಸಮಾಜವನ್ನು ಕಲ್ಪಿಸಿಕೊಳ್ಳುವುದೇ ದುಸ್ತರವಾದುದು. ಸಮಾಜವನ್ನು ಪ್ರತಿನಿಧಿಸುವ ಸಾಹಿತ್ಯದ ಯಾವುದೇ ಪ್ರಕಾರಗಳಲ್ಲಿ ದಲಿತರ ಬದುಕು ತಾನೇ ತಾನಾಗಿ ತುಂಬಿಕೊಳ್ಳುತ್ತದೆ. ಕಾದಂಬರಿ ಪ್ರಕಾರವಂತೂ ಸ್ವರೂಪದಲ್ಲಿ ಸಾಮಾಜಿಕತೆಯನ್ನು ಒಳಗೊಳ್ಳುವುದರಿಂದ ಸಮಾಜದ ಇತರ ವರ್ಗದ ಜನಗಳ ಬದುಕು ಎಂತೋ ಅದಕ್ಕೂ ಮಿಗಿಲಾಗಿ ದಲಿತರ ಬದುಕು ಮುಖ್ಯ ಸ್ಥಾನವನ್ನು ಆಕ್ರಮಿಸುತ್ತದೆ.

ಆಧುನಿಕ ಕನ್ನಡದಲ್ಲಿ ಪ್ರಧಾನವಾಗಿ ದಲಿತರನ್ನು ಕುರಿತು ಬರೆದ ಕಾದಂಬರಿಗಳು ಕೆಲವು ಮಾತ್ರ. ಪ್ರಾಸಂಗಿಕವಾಗಿ ದಲಿತರ ಬದುಕನ್ನು ಒಳಗೊಂಡ ಕಾದಂಬರಿಗಳೇ ಹೆಚ್ಚು ಶ್ರೇಣಿಕೃತ ಸಮಾಜದಲ್ಲಿ ಮೇಲ್ವರ್ಗದಿಂದ ಬಂದ ಲೇಖಕ ಹುಟ್ಟಿನ ಜೊತೆಗೆಯೇ ತನ್ನ ಪರಿಸರದ ಛಾಪನ್ನು ಒತ್ತಿಕೊಂಡು ಬೆಳೆಯುವುದರಿಂದ ಮತೀಯ ಇಲ್ಲವೆ ಪರಿಸರದ ಆಸಕ್ತಿಗಳು ಆತನ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವುದು ಸಹಜವೇ ಆಗಿದೆ. ಒಂದು ಜಾತಿಯಲ್ಲಿ ಹುಟ್ಟಿದ ಲೇಖಕ ಅದೇ ಜಾತಿಯನ್ನು ಕುರಿತು ಬರೆಯುವಾಗ ಆ ಜಾತಿಯನ್ನೇ ವೈಭವೀಕರಿಸುವ ಇಲ್ಲವೆ ಸರಳ ಮಾಹಿತಿಗಳನ್ನು ಕಲೆಹಾಕುವ ಸುಲಭೋಪಾಯದ ದಾರಿಯನ್ನು ಹಿಡಿಯುತ್ತಾನೆ. ಆದರೆ ನಿಜವಾದ ಕಲಾವಿದ ತಾನು ಯಾವ ಜಾತಿಯನ್ನು ಕುರಿತು ಕೃತಿ ರಚನೆ ಮಾಡುತ್ತಾನೋ ಆ ಜಾತಿಯನ್ನು ಇತರ ಜಾತಿಗಳಿಗಿಂತ ಮೇಲೆತ್ತರಿಸದೆ, ಉಳಿದ ಜಾತಿಗಳನ್ನು ಕೀಳಾಗಿ ಕಾಣದೆ ಇಡೀ ಸಮಾಜದ ಸಮಾನ ನೆಲೆಯಲ್ಲಿ ಆ ಜನಾಂಗವನ್ನು ಇರಿಸಿ ನೋಡುತ್ತಾನೆ. ಇಲ್ಲೆಲ್ಲಾ ಕಾದಂಬರಿಕಾರನ ಕಾಳಜಿ ವ್ಯಕ್ತವಾಗಬೇಕಾದುದು ಮಾನವ ನೋವಿನ ಬಿಡುಗಡೆಗಾಗಿಯೇ, ಹೊಸ ಗನ್ನಡ ಬಂದಲ್ಲಿ ದಲಿತರ ಸಂವೇದನೆಗಳನ್ನು ಪ್ರಧಾನವಾಗಿಟ್ಟುಕೊಂಡು ರಚಿತವಾದ ಕಾದಂಬರಿಗಳು ಒಂದು ಗುಂಪಾದರೆ, ಬದುಕಿನ ಸಂದರ್ಭದಲ್ಲಿ ಬೆಸೆದುಕೊಂಡಿರುವ ನಾನಾ ಸಮಸ್ಯೆಗಳಲ್ಲಿ ಒಂದಾಗಿ ಬರುವ ದಲಿತರ ಸಂವೇದನೆಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಕಾದಂಬರಿಗಳು ಮತ್ತೊಂದು ಗುಂಪಿನವುಗಳಾಗಿವೆ. ಈ ಹಿನ್ನೆಲೆಯಲ್ಲಿ ಕುವೆಂಪು ಕಾದಂಬರಿಗಳಲ್ಲಿ ಮೂಡಿ ಬಂದಿರುವ ದಲಿತ ಸಂವೇದನೆಯನ್ನು ಶೋಧಿಸುವ ಮುನ್ನ ಅಂದು ಕುವೆಂಪು ಅವರು ಕೆಳವರ್ಗದವರ ಬಗ್ಗೆ ಬರೆಯುವುದಕ್ಕೆ ಹಿನ್ನೆಲೆಯಾಗಿರುವ ಕೆಲವು ಅಂಶಗಳನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ. ನವೋದಯ ಸಾಹಿತ್ಯ ರಚನೆಯ ಕಾಲದಲ್ಲಿ ಬಹುಪಾಲು ಬ್ರಾಹ್ಮಣ ಲೇಖಕರೇ ಇದ್ದು, ಅವರಲ್ಲಿ ಕುವೆಂಪು

ಮಾತ್ರ ಬ್ರಾಹ್ಮಣೇತರರಾಗಿದ್ದರು. ಅವರೆಲ್ಲ ಕುವೆಂಪು ಅವರನ್ನು ಶೂದ್ರರನ್ನಾಗಿಯೇ ಕಾಣುತ್ತಿದ್ದು. ಆ ಕಾರಣಕ್ಕೆ ಅವರ ಸಾಹಿತ್ಯವನ್ನು ವಿನಾಕಾರಣ ಟೀಕೆಗೊಳಪಡಿಸಿದ್ದರೆಂಬುದು ಗುಟ್ಟಿನ ವಿಷಯವೇನಲ್ಲ. ಕುವೆಂಪು ಅವರಿಗೂ ಗೊತ್ತಿತ್ತು ಇದರಿಂದ ಅವರು ವಿಚಲಿತರಾಗದೆ ಶೂದ್ರ ನೆಲೆಯಿಂದಲೇ ಬದುಕನ್ನು ಅರ್ಥೈಸುವುದಕ್ಕೆ ಪ್ರಯತ್ನಿಸಿದರು. ಕುವೆಂಪು ಅವರ ಸೃಜನಶೀಲತೆ ಗರಿಗೆದರಲು ಶೂದ್ರ ಪ್ರಜ್ಞೆ ಮತ್ತು ಶೂದ್ರಾನುಭವಗಳೇ ಮುಖ್ಯ ಪ್ರೇರಣೆಗಳಾದವು. ಇದರಿಂದಾಗಿಯೇ ಕುವೆಂಪು ಸಾಹಿತ್ಯ ರಚನೆಯಲ್ಲಿ ವಿಭಿನ್ನ ಹಾದಿಯನ್ನು ಹುಡುಕಿಕೊಂಡರು. ರಾಮಾಯಣದ ಶಂಭೂಕ, ಮಹಾಭಾರತದ ಏಕಲವ್ಯ, ಸಾಮಾನ್ಯ ಜಲಗಾರ, ಇವರನ್ನು ತಮ್ಮ ಕೃತಿಗಳ ನಾಯಕರನ್ನಾಗಿರಿಸಿ ದಲಿತರಿಗಾಗುವ ಅಪಮಾನಗಳನ್ನು ಈ ಮೂಲಕ ದಾಖಲಿಸುತ್ತಾ ಬಂದಿದ್ದಾರೆ. ಪಂಪನ ಮನುಷ್ಯ ಜಾತಿ ತಾನೊಂದೇ 'ವಲಂ' ಎಂಬ ತತ್ವವನ್ನು ಕುವೆಂಪು ತಮ್ಮ ಸಾಹಿತ್ಯದಲ್ಲಿ ಪ್ರಾಮಾಣಿಕವಾಗಿ ಅಭಿವ್ಯಕ್ತಿಸಿದ್ದಾರೆ. ಈ ನಾಡಿಗೆ ಗಾಂಧೀಜಿ ಮತ್ತು ಅಂಬೇಡ್ಕರ್ ಚಳುವಳಿಗಳು ಪ್ರವೇಶಿಸುವುದಕ್ಕಿಂತ ಮುನ್ನವೇ ಕುವೆಂಪು ಅವರು ಶೂದ್ರರಿಗಾಗುವ ಅನ್ಯಾಯವನ್ನು ದಲಿತರಿಗಾಗುವ ಅಪಮಾನಗಳನ್ನು ತಮ್ಮ ಕೃತಿಗಳ ಮೂಲಕ ಪ್ರತಿಭಟಿಸುತ್ತಲೇ ಬಂದಿದ್ದಾರೆ.

ಕುವೆಂಪು ಅವರ ಕಾದಂಬರಿಗಳಲ್ಲಿ 'ದಲಿತ ಸಂವೇದನೆ' ಎಂಬ ವಿಷಯವಾಗಿ ಮಾತನಾಡುವಾಗ ನಮ್ಮ ಇಂದಿನ ಸಮಸ್ಯೆಗಳು ಮತ್ತು ನಾವು ಇಂದು ಅವುಗಳಿಗೆ ಪ್ರತಿಕ್ರಿಯಿಸುವ ರೀತಿಯನ್ನು ಗಮನದಲ್ಲಿಟ್ಟುಕೊಂಡು ನೋಡಲಾಗದು. ಕೃತಿಕಾರನ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಡೆಯೆತ್ತಿದ ಸಮಸ್ಯೆಗಳು ಮತ್ತು ಅವರು ಆಗ ಅವಕ್ಕೆ ಪ್ರತಿಕ್ರಿಯಿಸಿದ ಸ್ವರೂಪವನ್ನು ಅದೇ ಕಾಲಘಟ್ಟದ ಮನೋಭಾವದ ಸ್ತರದಲ್ಲಿ ನೋಡಬೇಕಾಗುತ್ತದೆ. ಕುವೆಂಪು ಅವರ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಈ ಎರಡು ಕಾದಂಬರಿಗಳು ಮಲೆನಾಡಿನ ಗ್ರಾಮೀಣ ಬದುಕನ್ನು ವಸ್ತುವಾಗಿಸಿಕೊಂಡಿವೆ. ಈ ಕಾದಂಬರಿಗಳಲ್ಲಿ ಒಕ್ಕಲಿಗ ಸಮುದಾಯದ ಬದುಕು ಪ್ರಧಾನವಾಗಿ ಬಂದರೂ ಅದಕ್ಕೆ ಹೊಂದಿಕೊಂಡಂತೆ ದಲಿತರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ ಸಮುದಾಯದ ಜೀವನಗಳು ಚಿತ್ರಣಗೊಂಡಿವೆ. ಕುವೆಂಪು ಹುಟ್ಟಿನಿಂದ ಒಕ್ಕಲಿಗ ಜಾತಿಯವರಾದರೂ ಆ ಜಾತಿಯ ಮೇಲ್ಮೆಯನ್ನೇನು ಸ್ಥಾಪಿಸುವುದಿಲ್ಲ. ಬದಲಿಗೆ ಒಕ್ಕಲಿಗ ಸಮುದಾಯಕ್ಕೆ ಸೇರಿದ ಭೂ ಮಾಲಿಕರು ನಡೆಸುವ ಭೋಗ ಜೀವನ ಮತ್ತು ಅವರು ಜೀತದಾಳುಗಳ ಮೇಲೆ ನಡೆಸುವ ಕ್ರೌರ್ಯ, ಹಿಂಸೆ ಮತ್ತು ದೌರ್ಜನ್ಯಗಳನ್ನು ಅನಾವರಣ ಮಾಡಿದ್ದಾರೆ. ಈ ಎರಡೂ ಕಾದಂಬರಿಗಳಲ್ಲಿ ಮನುಷ್ಯ ಬದುಕನ್ನು ಹಸನುಗೊಳಿಸುವ ಉದ್ದೇಶವೇ ಪ್ರಧಾನವಾಗಿ ಕಾಣಿಸಿಕೊಂಡಿದೆ. ಈ ಕಾರಣದಿಂದಲೇ ಭೂ ಮಾಲೀಕರ ದೌರ್ಜನ್ಯ ಮತ್ತು ವ್ಯವಸ್ಥೆಯ ಲಾಭ ಪಡೆದು ಮೈದಣಿಯದೇ ಬದುಕ ಬಯಸುವ ಪುರೋಹಿತಶಾಹಿಗಳ ಸ್ವಾರ್ಥದ ವಿರುದ್ಧ ಧ್ವನಿಯನ್ನು ಕಾದಂಬರಿಗಳ ಉದ್ದಕ್ಕೂ ಕಾಣಿಸಿದ್ದಾರೆ. ಜಾತಿ ವ್ಯವಸ್ಥೆಯಿಂದಾಗಿ ಕಮರಿ ಹೋಗುತ್ತಿರುವ ಮಾನವ ಸಂಬಂಧಗಳು, ಬಡತನದಿಂದಾಗಿಯೇ ಕಳ್ಳರಾಗಬೇಕಾಗುವ ಜೀತಗಾರರ ಪರಿಸ್ಥಿತಿ ಮತ್ತು ದುಸ್ಥಿತಿಗಳನ್ನು ಕುವೆಂಪ ಚಿತ್ರಿಸಿದ್ದಾರೆ. ಇಷ್ಟೇ ಅಲ್ಲದ ಮಾನವ ಬದುಕಿನಲ್ಲಿ ಅಂತರ್ಗತವಾಗಿರುವ ಪ್ರೀತಿ, ಪ್ರೇಮ, ಪ್ರಣಯಗಳು ಸೇರಿದಂತೆ ಸಾಮಾನ್ಯ ಜೀವಿಗಳಲ್ಲಿ ಹುದುಗಿರುವ ಅಸಾಮಾನ್ಯ ಗುಣ ಮತ್ತು ಜಾಣ್ಮೆಗಳನ್ನು ಚಿತ್ರಿಸಿದ್ದಾರೆ. ವಿಶೇಷವಾಗಿ ದಲಿತ ಬದುಕನ್ನು ಕಟ್ಟಿಕೊಟ್ಟಿರುವ ರೀತಿ ಸಾಧ್ಯವಾಗಿದೆ.

ಕುವೆಂಪು ಅವರ ಕಾದಂಬರಿಗಳಲ್ಲಿ ಪ್ರಮುಖವಾಗಿ ಎರಡು ಜಾತಿಗಳು ಕಂಡು ಬಂದರೂ ಇವರಿಗೆ ಹೊಂದಿಕೊಂಡಂತೆ ಹಲವಾರು, ಉಪ ಜಾತಿಗಳಷ್ಟೆ ಬದುಕು ಚಿತ್ರಿತವಾಗಿದೆ. ಭೌದ್ಧಿಕವಾಗಿ, ಸಾಮಾಜಿಕವಾಗಿ ಮೇಲ್‌ಸ್ಥರದಲ್ಲಿ ಬ್ರಾಹ್ಮಣರಿದ್ದಾರೆ, ಆರ್ಥಿಕವಾಗಿ, ಪ್ರಬಲರಾಗಿ ಒಕ್ಕಲಿಗರಿದ್ದಾರೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾದ ಕುಂಬಾರರು, ಬೇಲರು, ಮಗೇರು, ದೀವರು, ಶೇರೆಗಾರರು, ಶೆಟ್ಟರು, ಆಚಾರರು ಮೊದಲಾದವರಿದ್ದಾರೆ. ಕ್ರೈಸ್ತ ಮತ್ತು ಮುಸ್ಲೀಮರು ಚಿತ್ರಿತವಾಗಿದ್ದಾರೆ. ನಿರ್ದಿಷ್ಟವಾಗಿ ಕುವೆಂಪು ಕಾದಂಬರಿಗಳಲ್ಲಿ ಬರುವ ಅಸ್ಪೃಶ್ಯ ಜಾತಿಯಾದ 'ಹೊಲೆಯರು' ದಲಿತ ಪದದ ವ್ಯಾಪ್ತಿಗೆ ಒಳಗಾಗುತ್ತಾರೆ. ಇವರ ಬದುಕು ಪ್ರಧಾನವಾಗಿಲ್ಲವಾದರೂ ಮೇಲ್ಜಾತಿಯವರ ಬದುಕಿಗೆ ಪೂರಕವಾಗಿ ತಮ್ಮ ಅನುಭವ ಅನಿಸಿಕೆಗಳನ್ನು ಹೇಗೆ ವ್ಯಕ್ತ ಪಡಿಸಿದ್ದಾರೆ. ಸಮಸ್ತ ಬದುಕಿನೊಟ್ಟಿಗೆ ಹೇಗೆ ಹಂಚಿಕೊಂಡಿದ್ದಾರೆ ಎಂಬುದು ಮುಖ್ಯವಾಗುತ್ತದೆ. ಕುವೆಂಪು ಅವರ ಕಾದಂಬರಿಗಳಲ್ಲಿ ಬರುವ ದಲಿತರು ಮುಖ್ಯವಾಗಿ ಜೀತದಾಳುಗಳು, ಮುಗ್ದರು, ಅನಕ್ಷರಸ್ತರು, ಶ್ರಮ ಜೀವಿಗಳು ಆಗಿದ್ದಾರೆ. ಮೇಲ್ಜಾತಿಯವರಿಂದಾಗುವ ದೌರ್ಜನ್ಯ, ಶೋಷಣೆಗಳ ಅರಿವು ಇಲ್ಲದೆ ಕರ್ಮ ಸಿದ್ಧಾಂತವನ್ನು ನಂಬಿದವರು. ಕುವೆಂಪು ಕಾದಂಬರಿಗಳಲ್ಲಿ ವರ್ಣಿತ ದಲಿತರು ಒಕ್ಕಲಿಗ ಜಮೀನ್ದಾರರ ಮನೆಯ ಜೀತಗಾರರಾಗಿ, ಮೂಢನಂಬಿಕೆಗಳ ದಾಸರಾಗಿ, ಹೆಂಡ–ಮಾಂಸಗಳ ಆಸೆ ಬುರುಕರಾಗಿ, ಪ್ರೀತಿ–ಪ್ರೇಮಗಳ ಕನಸುಗಾರರಾಗಿ, ಸಾಲಗಳ ಶೂಲದಲ್ಲಿ ಸಿಲುಕಿದವರಾಗಿ, ಜಮೀನ್ದಾರರ ಕ್ರೌರ್ಯಕ್ಕೆ ಬಲಿಯಾಗಿ, ಅಸ್ಪೃಶ್ಯತೆಯ ಅಪಮಾನಗಳನ್ನು ಸಹಿಸಿಕೊಂಡವರಾಗಿ ಕಾಣಿಸುತ್ತಾರೆ. ದಲಿತರ ವಿಶಿಷ್ಟ

ಅನುಭವ ಲೋಕಗಳ ಅನಾವರಣ, ಉಪಾಯ-ತಂತ್ರಗಳಲ್ಲಿನ ಜಾಣತನ, ತಿಳುವಳಿಕೆ-ಕುಶಲತೆಗಳ ಪರಿಣಿತಿ, ಬಾಹ್ಯ-ಆಂತರಿಕ ವೈರುಧ್ಯಗಳು, ಹೆಣ್ಣು-ಗಂಡಿನ ಸಂಬಂಧಗಳಲ್ಲಿ ಸುದ್ದಿವಾಹಕರಾಗಿ, ಕಳ್ಳತನ, ಒಡೆಯರ ಹಿತಾಸಕ್ತಿಗೆ ಬಲಿಯಾಗುವ ಪ್ರಸಂಗಗಳಲ್ಲಿ ಉಡುಗೆ-ತೊಡುಗೆಗಳಲ್ಲಿ ಆಹಾರ ವಿಚಾರಗಳಲ್ಲಿ ಇವೇ ಮೊದಲಾದ ಅಂಶಗಳು ದಲಿತರಲ್ಲಿ ಹೇಗೆ ಅಭಿವ್ಯಕ್ತವಾಗಿವೆ ಎಂಬುದನ್ನು ಕುವೆಂಪು ಅವರು ತಮ್ಮ ಎರಡೂ ಕಾದಂಬರಿಗಳ ಮೂಲಕ ಅನಾವರಣಗೊಳಿಸಿದ್ದಾರ.

1936 ರಲ್ಲಿ ರಚಿತವಾದ 'ಕಾನೂರು ಹೆಗ್ಗಡತಿ' ಮಲೆನಾಡಿನ ಮನುಷ್ಯ ಮತ್ತು ನಿಸರ್ಗ ಸಂಬಂಧಗಳನ್ನು ಕುರಿತದ್ದಾಗಿದೆ. ಸಾಮಾಜಿಕ ಶ್ರೇಣಿಕೃತ ಜಾತಿ ವ್ಯವಸ್ಥೆಯಲ್ಲಿ ಈ ಕಾದಂಬರಿಯ ಮೇಲ್‌ಸ್ಥರದಲ್ಲಿ ಬ್ರಾಹ್ಮಣ, ಒಕ್ಕಲಿಗರು ಸ್ಥಾನಪಡೆದುಕೊಂಡಿದ್ದಾರೆ. ಕೆಳಸ್ತರದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾದ ಶೆಟ್ಟರು, ಶೇರೆಗಾರರು, ಆಚಾರರು, ಹಳೆ ಪೈಕದವರು ಕಾಣುತ್ತಾರೆ. ಈ ಕಾದಂಬರಿಯಲ್ಲಿ ಬರುವ 'ಹೊಲೆಯರು' ಮುಖ್ಯವಾಗಿ 'ದಲಿತರು' ಎಂಬ ಶಬ್ದಕ್ಕೆ ಸೀಮಿತವಾಗಿ ಅನ್ವಯಿಸಿ ಇವರ ಜೀವನವನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ. ಕಾನೂರು ಹೆಗ್ಗಡತಿಯಲ್ಲಿ ದಲಿತರನ್ನು ಎರಡು ಭಾಗವಾಗಿ ವಿಂಗಡಿಸಿ ಕಾಣಬಹುದು. ಒಂದನೆಯವರು ಮುಟ್ಟಾಳುಗಳು ಇವರು ಕಾನೂರಿನ ಮನೆ ಹಿಸ್ಸೆಯಾದಾಗ ಮನೆಯ ಒಳಗಿನ ಸಾಮಾನುಗಳನ್ನು ಎತ್ತಿ ಇಡಲು ಉಪಯೋಗವಾಗುತ್ತಿದ್ದರು. ಎರಡನೆಯವರು ಮನೆಯ ಒಳಗಿನ ಸಾಮಾನುಗಳನ್ನು ಮುಟ್ಟುವ ಅಧಿಕಾರವಿಲ್ಲ ಯಾವುದೇ ಕೆಲಸವಿದ್ದರೂ ಮನೆಯ ಹಿತ್ತಲ ಬಾಗಿಲವರೆಗೆ ಮಾತ್ರ ಬರುತ್ತಾರೆ.

ಅವಮಾನ ಮತ್ತು ಬಡತನದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ದಲಿತ ಸಂವೇದನೆಗೆ, ಉದಾಹರಣೆಗೆ ಹಲವಾರು ಪ್ರಸಂಗಗಳು ಕಾಣಿಸುತ್ತವೆ. ಅವುಗಳಲ್ಲಿ ಮುಖ್ಯವಾಗಿ, ಬೈರನಿಗೆ ಹೆಂಡವೆಂದರೆ ಪ್ರಾಣ. ತನ್ನ ವೃತ್ತಿ ಧರ್ಮವನ್ನು ಮೀರಿ ಕಾಡಿನಲ್ಲಿ ಯಾರಿಗೂ ತಿಳಿಯದಂತೆ ಕಳ್ಳ ಬಗನಿ ಕಟ್ಟುತ್ತಾನೆ. ಅರಣ್ಯ ಇಲಾಖೆಯವರ ಕೈಗೆ ಸಿಲುಕಿ ಫಜೀತಿಗೆ ಒಳಗಾಗುತ್ತಾನೆ. ಇವನ ಮಗ ಗಂಗ ಚಿಕ್ಕಂದಿನಲ್ಲಿಯೇ ಹೆಂಡದ ಚಟಕ್ಕೆ ಅಂಟಿಕೊಳ್ಳುತ್ತಾನೆ. ಒಮ್ಮೆ ಹೊಲದಲ್ಲಿ ಭೂಮಿ ಉಳುಮೆ ಮಾಡುವಾಗ ನೇಗಿಲು ಮುರಿದದ್ದಕ್ಕೆ ಚಂದ್ರಯ್ಯ ಗೌಡರು ಕೋಪಗೊಂಡು ಬೈರನಿಗೆ 'ಪಡಿಭತ್ತ' ಕೊಡದೆ ಹೊಡೆದು ಅಟ್ಟುತ್ತಾರೆ. ಅವಮಾನಿತನಾಗಿ ನೇರವಾಗಿ ಹೆಂಡದಂಗಡಿಗೆ ಹೋಗುತ್ತಾನೆ. ಕಂಠಪೂರ್ತಿ ಕುಡಿದು ಮತ್ತನಾಗಿ ಬಿಡಾರಕ್ಕೆ ಬರುತ್ತಾನೆ. ಹೆಂಡತಿ ಸೇಸಿಗೆ ಊಟಕ್ಕೆ ಹಾಕುವಂತೆ ಕೇಳುತ್ತಾನೆ. ಅವಳು ಬಿಡಾರದಲ್ಲಿ ಭತ್ತವಿಲ್ಲವೆಂದು ಅಡಿಗೆ ಮಾಡಿಲ್ಲವೆಂದು ಹೇಳುತ್ತಾಳೆ. ನೆರಮನೆಯಿಂದ ತರಬಾರದೆ ಎಂದು ಕೇಳುತ್ತಾನೆ. ನೆರಮನೆಯವರು ಕಣಜ ಕಟ್ಟಿಲ್ಲವೆಂದು ಉತ್ತರಿಸುತ್ತಾಳೆ. ಮಾತಿಗೆ ಮಾತು ಬೆಳೆದು ಬೈರ ಹೆಂಡತಿಯನ್ನು ಹೊಡೆಯುತ್ತಾನೆ. ಯಾರೊಬ್ಬರೂ ಬಿಡಿಸಿಕೊಳ್ಳುವುದಿಲ್ಲ. ಈ ಘಟನೆಯಿಂದ ತಿಳಿದು ಬರುವ ಸಂಗತಿ ದಲಿತರಿಗೆ ಒಂದು ದಿನ ಪಡಿ ಭತ್ತ ತಪ್ಪಿದರೆ ಅವರ ಬದುಕಿನಲ್ಲಿ ಸಮತೋಲನ ತಪ್ಪುತ್ತದೆ. ಕೂಲಿ ಕೈ ಸೇರದ ದಿನ ದಲಿತರ ಕೇರಿಗಳಲ್ಲಿ ಹೊಗೆ ಏಳುವುದಿಲ್ಲ ಎಂಬ ಅಂಶವನ್ನು ಕಾಣಬಹುದು.

ದಲಿತರ ಆಹಾರ ಪದ್ಧತಿಯಲ್ಲಿ ಕಾಣುವ ಸಂವೇದನೆಗೆ ಉದಾಹರಣೆಯಾಗಿ ದಾಖಲಿಸ ಬಹುದಾದ ಪ್ರಸಂಗ, ಒಮ್ಮೆ ಬೇಲರ ಸಿದ್ಧ, ಹೊಲೆಯರ ಬೈರ ಮೀನು ಬೇಟೆಯಾಡುವಾಗ ತಮ್ಮ ತಮ್ಮ ಒಡೆಯರ ವಿಷಯವಾಗಿ ಮಾತನಾಡುತ್ತಿದ್ದರು. ಭೈರ ಸಿದ್ಧನಿಗೆ ಹೇಳುವ ಮಾತು "ನೋಡು ಮೊನ್ನೆ ಅದು ಹಡೆದಾಗ (ತನ್ನ ಹೆಂಡತಿ) ಹೂವಯ್ಯ ಗೌಡರು ಎಷ್ಟು ಉಪಚಾರ ಮಾಡಿದ್ರೂ ಅಂದ್ರೆ" ಅಕ್ಕಿ, ಬೆಲ್ಲ, ತುಪ್ಪ, ಕಾಫಿ, ಹಾಲು, ಜಾಸ್ತಿ ಏನು ನಮ್ಮ ಬಿಡಾರ ಮನೆಯಾಗಿ ಹೋಗಿತ್ತು. "ನಂಗಂತು ನನ್ಹೆಡ್ತಿ ದಿನಾ ಹಡೀತಾನೆ ಇದ್ದಿದ್ರೆ, ಅನ್ನಿಸಿಬಿಡ್ತು... ನಗಬೇಡ ಅಂತೀನಿ... ನಿಂಗೊತ್ತಿಲ್ಲ ಅವರ ಮೈಮೆ!" (ಪುಟ. 535). ಎನ್ನುವ ಈ ಸನ್ನಿವೇಶ ದಲಿತರು ಉಳ್ಳವರು ಕೊಡುವ ಆಹಾರದ ಬಗೆಗಿನ ಆಸೆಯನ್ನು ಕಾಣುತ್ತೇವೆ. ಪುಟ್ಟಣ್ಣನ ಟೈಗರ್ ನಾಯಿ ಶವವನ್ನು ಭೈರ ಬೆನ್ನಿನ ಮೇಲೆ ಹಾಕಿಕೊಂಡನು. ಹಿಂದೆ ಅನೇಕ ಸಾರಿ ಸತ್ತ ಕರುಗಳನ್ನು ಹಾಗೆಯೆ ಹೊತ್ತಿದ್ದ ಅವನಿಗೆ ಅದೊಂದು ಶ್ರಮವಾಗಿರಲಿಲ್ಲ (ಪು.141) ಎನ್ನುವಲ್ಲಿ ದಲಿತರು ಶತಶತಮಾನಗಳಿಂದ ಸತ್ತ ಪ್ರಾಣಿಗಳನ್ನು ಹೊರುತ್ತಿದ್ದರು ಎಂಬ ಮಾರ್ಮಿಕ ನುಡಿಯನ್ನು ಕಾಣಬಹುದು; ಭೈರನಿಗೆ ಬಡತನದಿಂದಾಗಿ ನಾಯಿಯ ಶವದ ಮೇಲಿನ ಬಟ್ಟೆಗೆ ಆಸೆ ಪಡುವ ಪ್ರಸಂಗ ಈ ರೀತಿಯಾಗಿದೆ. ಪುಟ್ಟಣ್ಣನ ಟೈಗರ್ ಸತ್ತಾಗ ಅದಕ್ಕೆ ಪಂಚೆಯನ್ನು ಸುತ್ತಿ ಮಣ್ಣು ಮುಚ್ಚುತ್ತಿದ್ದಾಗ ಭೈರ ಮನಸಿನಲ್ಲಿಯೆ 'ನನಗಾದ್ರೂ ಕೊಟ್ಟಿದ್ದರೆ ಆ ಪಂಚೆಯನ್ನು! ಸುಮ್ಮನೆ ಮಣ್ಣು ಮಾಡುತ್ತಿದ್ದಾರಲ್ಲಾ ಎಂದು ಕೊಂಡನು.' (ಪು.150) ಪಿಕಳಾರದ ಹಕ್ಕಿಮರಿಗಳನ್ನು ಯಾರೋ ಕದ್ದುಕಂಡು ಹೋಗಿರಬಹುದೆಂದು ವಾಸು ಗೊಡರ ಮಾಸು ಕೋಪಗೊಂಡಾಗ ಹತ್ತಿರವಿದ್ದ ಅಸ್ಪೃಶ್ಯ ಗಂಗನ ಮನಸ್ಸಿನ ತೊಳಲಾಟ ಗಮನಾರ್ಹ. ಗಂಗನು ಅಸ್ಪೃಶ್ಯನಾದ ತನ್ನನ್ನು ತುಸು ಮುಟ್ಟುವುದಿಲ್ಲ ವೆಂಬ ಕಿಚ್ಚಿನಿಂದ ಸ್ವಲ್ಪವೂ

ಅಪ್ರತಿಭನಾಗದೆ "ನಾ ಈ ಕಡೆಗೇ ಬರಲಿಲ್ಲ ದೇವ್ರಾಣೆ! … ಎಂದು ವಾಸುವಿನ ಕೋಪಾಗ್ನಿಯ ಪ್ರವಾಹವನ್ನು ಬೇರೆಯ ದಿಕ್ಕಿಗೆ ತಿರುಗಿಸಲು ಉಪಾಯ ಹೂಡಿದನು. (ಪುಟ.60) ಚಂದ್ರೇಗೌಡರ ಕಿರಿಯ ಮಗ ವಾಸು ಹೊಲೆಯರ ಭೈರನ ಮಗ ಮಾಂಸದ ಆಸೆಗಾಗಿ ಹಕ್ಕಿಯ ಮರಿಗಳನ್ನು ಕದ್ದನೆಂದು ಕೋಪದಿಂದ ಬೇಲರವನನ್ನು ಮುಟ್ಟಬಾರದೆಂದು ಗೊತ್ತಿದ್ದರೂ ಒನಕೆಯಿಂದ ಹಿಟ್ಟು ಕುಟ್ಟುವಂತೆ ಗಂಗನ ಮೈಗೆ ಗುದ್ದಿ ತನ್ನ ಜೇಬಿನಲ್ಲಿದ್ದ ಹಕ್ಕಿಯನ್ನು ಬಿಸಾಡಿ, ದಾರಿಯಲ್ಲಿ ಬೇಲರವನನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಹಟ್ಟಿಗೆ ಹೋಗಿ ಸಗಣಿಯನ್ನು ಮೆಟ್ಟಿ ಹಿತ್ತಲ ಕಡೆಯ ಬಾಗಿಲಿಂದ ಮನೆಯನ್ನು ಪ್ರವೇಶಿಸಿದನು (ಪು.61)" ಎನ್ನುವಲ್ಲಿ ಮೇಲ್ಜಾತಿಯ ಗೌಡರ ಮಕ್ಕಳು ದಲಿತ ಹುಡುಗನಿಗೆ ಶಿಕ್ಷಿಸಿ ಅಸ್ಪೃಶ್ಯತೆಯ ಮನೋಭಾವವನ್ನು ವ್ಯಕ್ತ ಪಡಿಸಿರುವುದನ್ನು ಕಾಣುತ್ತೇವೆ.

'ಮಲೆಗಳಲ್ಲಿ ಮದುವುಗಳು' ಕಾದಂಬರಿಯಲ್ಲಿ ಬರುವ ದಲಿತರು ಬಹುಪಾಲು ಒಕ್ಕಲಿಗರ ಜೀತದಾಳುಗಳು, ಹಾಗೂ ವಲಸೆ ಬಂದ ಕೂಲಿಕಾರರು, ಕುವೆಂಪು ಅವರ ಲಕ್ಷ್ಯವೆಲ್ಲ ಶ್ರೀ ಸಾಮಾನ್ಯನ ಬದುಕಿನ ಕಡೆಗೆ ವಿಶೇಷ ಕಾಳಜಿ ಇರುವುದು ವ್ಯಕ್ತವಾಗುತ್ತದೆ. ಇಲ್ಲಿ ಕಾಣುವ ದಲಿತ ಪಾತ್ರಗಳಾದ ಗುತ್ತಿ, ತಿಮ್ಮಿ, ಐತ–ಪೀಂಚಲು ದೊಡ್ಡಬೀರ–ಸೇಸಿ, ಸಣ್ಣಬೀರ–ಮೊದಲಾದವರು ಪ್ರತಿಷ್ಠ, ಅಧಿಕಾರ, ಸ್ಥಾನಮಾನಗಳಲ್ಲದೆ, ಬಡತನ, ಶೋಷಣೆ, ಅಪಮಾನ, ಪ್ರೀತಿ–ಪ್ರೇಮಗಳ ಸುಳಿಯಲ್ಲಿ ಮೆರೆಯುತ್ತಾರೆ. ಬಡತನದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಜೀತ ಪದ್ಧತಿಯಿಂದಾಗಿ ದಲಿತರು ಜಮೀನ್ದಾರ ಒಕ್ಕಲಿಗರಲ್ಲಿ ವಂಶ ಪರಂಪರೆಯಿಂದ ಕೂಲಿ ಆಳುಗಳಾಗಿ ದುಡಿಯುತ್ತಾರೆ. ದಿನದ ದುಡಿಮೆಗೆ ಸಂಜೆ 'ಪಡಿಭತ್ತ' ದೊರೆಕಿದರೆ ಅವರಿಗೆ ಬೇರೆ ಯೋಚನೆಗಳೇ ಇರುವುದಿಲ್ಲ. ಸಂಭಾವಿ ಭರಮ್ಮೈ ಹೆಗ್ಗಡೆಯವರ ಜೀತದಾಳು ಹೊಲೆಯರ ಗುತ್ತಿಗೆ ಸಂಬಂಧಿಸಿದ ವಿವರಗಳು ಹಾಗೂ ಬೆಟ್ಟಳ್ಳಿ ಕಲ್ಲಯ್ಯ ಗೌಡರ ಜೀತದಾಳು ದೊಡ್ಡಬೀರನಿಗೆ ಸಂಬಂಧಿಸಿದ ವಿವರಗಳು, ಇವರಿಬ್ಬರ ಬದುಕಿಗೆ ಹೊಂದಿಕೊಂಡಂತೆ ಹಲವಾರು ಸಮಸ್ಯೆಗಳು, ಸನ್ನಿವೇಶಗಳು ಕಾದಂಬರಿಯುದ್ದಕ್ಕೂ ವರ್ಣಿತವಾಗಿವೆ. ಒಕ್ಕಲಿಗರು ತಮ್ಮ "ಆಸ್ತಿಯನ್ನು ಭಾಗಮಾಡಿ ಹಂಚಿಕೊಳ್ಳುವಂತೆ ಜೀತದಾಳುಗಳನ್ನು ಮನೆ ಪಾಲುದಾರ ವಸ್ತುಗಳಂತೆ ಹಂಚಿಕೊಳ್ಳುತ್ತಾರೆ ಪರಾವಲಂಬಿಯ ಬದುಕು, ಯಾವುದೇ ಹಕ್ಕು ಸ್ವಾತಂತ್ರ್ಯವಿರುವುದಿಲ್ಲ. ದಲಿತರು ತಮ್ಮ ಮಕ್ಕಳ ಮದುವೆ ಮಾಡುವಾಗಲೂ ಸ್ವತಂತ್ರರಲ್ಲ. ಗುತ್ತಿ, ತಾನು ಪ್ರೀತಿಸಿದವಳನ್ನು ಮದುವೆಯಾಗಲು ಒಡೆಯರಲ್ಲಿ ಸಾಲಕ್ಕಾಗಿ ಅತ್ಯಂತ ದೈನ್ಯದಿಂದ ಬೇಡಿಕೊಳ್ಳುತ್ತಾನೆ. ಒಡೆಯರು ಸಾಲಕೊಡಲು ನಿರಾಕರಿಸಿದಾಗ 'ನನ್ನ ಕೈ ಬಿಡಬ್ಯಾಡಿ ನಾನೊಂದು ನಿಮ್ಮ ಕಾಲಕಸ, ಸಾಯುವವರೆಗೂ ನಿಮ್ಮ ಗುಲಾಮನಾಗಿ ದುಡಿದು ಸಾಲ ತೀರಿಸ್ತೀನಿ' (ಪು.340) ಎಂದು ಗದ್ಗದಿಸುತ್ತಾ ಉದ್ದಂಡ ನಮಸ್ಕಾರ ಮಾಡುತ್ತಾನೆ."

ಈ ಕಾದಂಬರಿಯಲ್ಲಿ ವಿವಿಧ ಜಾತಿಯ ಜನರು ವಾಸ ಮಾಡುವ ಪ್ರತ್ಯೇಕ ಸ್ಥಳಗಳನ್ನು ಕಾಣುತ್ತೇವೆ. ಮೇಲ್ವರ್ಗದವರು ವಾಸಿಸುವ ಸ್ಥಳಗಳಿಗೆ 'ಮನೆ'ಗಳೆಂದೂ, ಕೆಳ ವರ್ಗದವರು ವಾಸಿಸುವ ತಾಣಗಳಿಗೆ 'ಬಿಡಾರ'ಗಳೆಂದೂ, ದಲಿತರು ವಾಸಿಸುವ ಸ್ಥಳಗಳಿಗೆ 'ಬಿಡಾರ ಕೇರಿ' ಗಳೆಂದು ಗುರುತಿಸಲಾಗಿದೆ ಆಯಾ ಜಮೀನ್ದಾರನಿಗೆ ಹೊಂದಿಕೊಂಡಂತೆ ಒಂದೊಂದು ದಲಿತರ ಕೇರಿಗಳಿವೆ. ಈ ಕಾದಂಬರಿಯಲ್ಲಿ ಮೂರು ಕಡೆಗಳಲ್ಲಿ ಈ 'ಕೇರಿ'ಗಳು ದೊರೆಯುತ್ತವೆ. ಸಿಂಭಾವಿಯಲ್ಲಿ ಭೈರಮ್ಮೈ ಹೆಗ್ಗಡೆಯವರಿಗೆ ಸಂಬಂಧಪಟ್ಟ ಕೇರಿ, ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಿಗೆ ಸಂಬಂಧಪಟ್ಟ ಕೇರಿ ಮತ್ತು ಬೆಟ್ಟಳ್ಳಿ ಕಲ್ಲಯ್ಯ ಗೌಡರಿಗೆ ಸಂಬಂಧಪಟ್ಟ ಕೇರಿಗಳಿವೆ. ಸಿಂಭಾವಿಯ ಹೊಲೆಯರ ಗುತ್ತಿ, ಹಳೆ ಮನೆಯರ 'ಕೇರಿ'ಯ ವಿವರಗಳು ದಾಖಲಾಗಿವೆ. ಕೇರಿಯವರ ಬದುಕು ಜಮೀನ್ದಾರರ ಆಜ್ಞೆಯನುಸಾರವಾಗಿಯೇ ನಡೆಯುತ್ತವೆ. ಜೀತದಾಳು ಮತ್ತು ಜಮೀನ್ದಾರರ ನಡುವೆ ಒಡೆಯ ಗುಲಾಮ ಸಂಬಂಧಗಳು ಕಾಣುತ್ತವೆ. ಜೀತದಾಳುಗಳಿಗೆ ಆಕಸ್ಮಿಕವಾಗಿ ಒಡೆಯರು ದಾರಿಯಲ್ಲಿ ಎದುರಾದರೆ ದಾರಿ ಬಿಟ್ಟು ದೂರಸರಿದು ನಿಲ್ಲಬೇಕು. ಒಡೆಯರಿಗೆ ಅಡ್ಡಬಿದ್ದು ಗೌರವ ತೋರಿಸಬೇಕು. 'ಹಳೆಮನೆ ಹೆಗ್ಗಡೆಯವರನ್ನು ಗುರುತಿಸಿದೊಡನೆಯೆ ಗಂಡಾಳುಗಳೆಲ್ಲ ಹೊಟ್ಟೆ ಅಡಿಯಾಗಿ ಮಣ್ಣು ಮುಟ್ಟುವಂತೆ, ಎಲ್ಲಿ ಅಂದರಲ್ಲಿ ನಿಂತಿದ್ದ ಎಡೆಯಲ್ಲಿಯೆ ಮುಳ್ಳು ಪೊದೆ ಒಂದನ್ನು ಲೆಕ್ಕಿಸದೆ 'ಅಡ್ಡ ಬಿದ್ದೆ ಒಡೇರಿಗೆ'! ಎಂದು ಪದ್ಧತಿಯ ಗೌರವವನ್ನು ಯಾಂತ್ರಿಕವಾಗಿ ಎಚ್ಚರಿಸುತ್ತಾ ಉದ್ದುದ್ಧವಾಗಿ ಅಡ್ಡ ಬಿದ್ದು' ದೀರ್ಘದಂಡ ನಮಸ್ಕಾರ ಮಾಡಿದರು" (ಪು. 303) ಎನ್ನುವಲ್ಲಿ ದಲಿತರು ಮೇಲ್ಜಾತಿಯವರಿಗೆ ತೋರಿಸುವ ಗೌರವದ ಧೈನ್ಯತೆಯ ಭಾವವನ್ನು ಕಾಣುತ್ತೇವೆ. ಹಳೆಮನೆ ಕೇರಿಯ ಕುಳವಾಡಿ ಸಣ್ಣ ಐವತ್ತು ವರ್ಷದ ಹಿರಿಯ ತನ್ನ ಕೇರಿಯಲ್ಲಿ ಮಾತ್ರವಲ್ಲದೆ ಸಿಂಬಾವಿ, ಕೋಗೂರು, ಬೆಟ್ಟಳ್ಳಿ ಮೊದಲಾದ ಕೇರಿಗಳಲ್ಲಿಯೂ ಅವನಿಗೆ ಗೌರವ ಸಲ್ಲುತ್ತದೆ. ವಯಸ್ಸಿನ ಹಿರಿತನದಿಂದಾಗಿಯೇ ಅವನಿಗೆ 'ಕುಳವಾಡಿ' ಪಟ್ಟವೂ ದೊರೆಯುತ್ತದೆ. ಜಾತಿ ಸಂಬಂಧವಾದ ವ್ಯಾಜ್ಯಗಳಲ್ಲಿ ನೀತಿ

ಸಂಬಂಧವಾದ ಬಹಿಷ್ಕಾರಾದಿ ವಿಷಯಗಳಲ್ಲಿ–ಹೆಣ್ಣು–ಗಂಡು ಕೊಟ್ಟು ತರುವ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಕುಳವಾಡಿ ಸಣ್ಣನ ತೀರ್ಪಿಗೆ ತನ್ನ ಜಾತಿಯವರು ಗೌರವ ಕೊಡುತ್ತಾರೆ.

ಬಡತನವೇ ಬಾಳಾಗಿದ್ದ ಕುಳವಾಡಿ ಸಣ್ಣನ ಹೆಂಡತಿ ತೀರಿಕೊಂಡಿರುತ್ತಾಳೆ. ಮದುವೆ ವಯಸ್ಸಿಗೆ ಬೆಳೆದುನಿಂತ ಮಗಳು ಪುಟ್ಟಿ ಇರುತ್ತಾಳ. ತಮ್ಮಂದಿರಿಗೆ ಗಂಜಿ ಬೇಯಿಸಿ ಹಾಕಿ, ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದುದರಿಂದ ಪುಟ್ಟಿ ಸಣ್ಣನ ಸಂಸಾರಕ್ಕೊಂದು ಆಧಾರವಾಗಿರುತ್ತಾಳೆ. ನೆಂಟರಿಷ್ಟರು ಮಗಳ ಮದುವೆಯ ಪ್ರಸ್ತಾಪ ಮಾಡಿದಾಗ, ಕುಳವಾಡಿಸಣ್ಣ– 'ಅವಳಿನ್ನೂನೆರೆದು ಎರಡೂ ವರ್ಷವೂ ಆಗಿಲ್ಲ, ಅವಳಿಗಿಂತಲೂ ದೊಡ್ಡವರು ಕೇರಿಯಲ್ಲಿ ಮದುವೆಯಾಗದೆ ಇರುವವರು ಇಲ್ಲವೆ? ಇಷ್ಟು ಅವಸರ ಏಕೆ ಅವಳ ಮದುವೆಗೆ' (ಪು. 101) ಎನ್ನುತ್ತಾನೆ. ಮಗಳು ಮದುವೆಯಾಗಿ ಗಂಡನ ಮನೆಗೆ ಹೋದರೆ ತನಗೂ ಮಕ್ಕಳಿಗೂ ಗಂಜಿ ಬೇಯಿಸಿ ಹಾಕುವವರು ಯಾರು? ಎಂಬುದೇ ಸಣ್ಣನ ಸಮಸ್ಯೆಯಾಗಿದೆ. ಯಾರಾದರೂ ಮನೆ ಅಳಿಯ ಆಗಲು ಒಪ್ಪುವ ಹುಡುಗ ಸಿಕ್ಕರೆ ಮಗಳ ಮದುವೆ ಮಾಡಬೇಕೆಂಬುದು ಸಣ್ಣನ ದೂರಾಲೋಚನೆಯಾಗಿರುತ್ತದೆ.

ಕುಳವಾಡಿ ಸಣ್ಣನ ಕೇರಿಯಲ್ಲಿ ಹಸಿವಿನಿಂದ ಅಳುವ ಮಗುವಿಗೆ ಹುಸಿ ಸಮಾಧಾನ ಹೇಳಿ ರಮಿಸುವ ಚಿತ್ರಣ ಕರುಣಾಜನಕವಾಗಿದೆ. ಕುಳುವಾಡಿ ಸಣ್ಣನ ಮಗಳು ಪುಟ್ಟಿ ಗುಡಿಸಲು ಮೂಲೆಯಲ್ಲಿದ್ದ ಒಂದು ಒಲೆಯ ಮೇಲೆ ಗಡಿಗೆಯಲ್ಲಿ ಗಂಜಿ ಬೇಯಿಸುತ್ತಿದ್ದಳು. ಕೈಯಲ್ಲಿ ಒಂದು ಬಿದಿರು ಹಿಡಿಯ ಕರಟದ ಚೌಟನ್ನು ಹಿಡಿದು ಆರೆ ಬೆಳಕಿನಲ್ಲಿ ಗಂಜಿ ಬೆಂದಿದೆ ಇಲ್ಲವೆ ಎಂದು ಅಗುಳನ್ನು ಹಿಸುಕಿ ನೋಡುತ್ತಿದ್ದಳು, … ಈ ಕಡೆ ನಾಲ್ಕೈದು ವರ್ಷದ ಹುಡುಗ ಗಂಗನ ಬಳಿ ಕುಳಿತು ಕುಳವಾಡಿ ಸಣ್ಣ ತಾನೇ ಕೆಮ್ಮುತ್ತ ಸಿಂಬಳ ಸುರಿಸುತ್ತಾ ಮಗನಿಗೆ ಸಮಾಧಾನ ಹೇಳುತ್ತಿದ್ದ, "ಆಯ್ತು ಮಗಾ, ಆಯ್ತು… ಗಂಜಿ ಕುಡಿದು ಸುಮ್ಮನೆ ಮಲಗ ಬೈದಂತೆ ಅಳಬ್ಯಾಡ ಸುಮ್ಕಿರು…. ಆಯ್ತು, ಇನ್ನೇನು ಆಯ್ತು… ಅಲ್ಲೀನೇ" ಪುಟ ( ಪು.103) ಎಂಬ ಮಗನ ಸಂತೈಕೆಗಾಗಗಿ ಮಗಳನ್ನು ಹತ್ತನೆಯ ಸಲವೋ ಹನ್ನೊಂದನೆಯ ಸಲವೊ ಯಾವ ನಿಕೃಷ್ಟ ಉತ್ತರದ ಅಭಿಲಾಷೆಯೂ ಇಲ್ಲದ ಪ್ರಶ್ನೆ ಕೇಳಿದ ಈ ಸನ್ನಿವೇಶ ದಲಿತರಿಗೆ ಅನ್ನದ ಸಮಸ್ಯೆ ಕಾಡಿದಾಗ ಅಳುವ ಮಕ್ಕಳಿಗೆ ಸಮಾಧಾನ ಪಡಿಸಲು ಸುಳ್ಳು ಹೇಳಬೇಕಾದ ಸಂದರ್ಭವಿದು. ತಿಮ್ಮಪ್ಪ ಹೆಗ್ಗಡೆ ಕೇರಿಗೆ ಕಾಲಿಟ್ಟು ತನ್ನ ಅಬ್ಬರವನ್ನು ವ್ಯಕ್ತ ಪಡಿಸಿದಾಗ ಸಣ್ಣ ತನ್ನ ಮಗಳಿಗೆ "ಏ ಪುಟ್ಟೀ ಸಣ್ಣ ಹೆಗ್ಗಡೇರ ಸವಾರಿ ಬಂದ ಹಾಂಗೆ ಕಾಣ್ತದೆ, ಕೆಲಸಕ್ಕೆ ಕರೆಯೋಕೆ. ಎಲ್ಲರೂ ಬಿಡಾರದ ಒಳಗೇ ಇದಾರೆ, ಒಬ್ಬರೂ ಹೊರಗೆ ತಲೆ ಹಾಕಿದ್ದಾಂಗೆ ಕಾಣದಿಲ್ಲ. ಇನ್ನು ಅವರೇ ಕೇರಿ ಒಳಗೆ ನುಗ್ಗಿದ್ರೆ. ಇಡೀ ಕೇರಿಗೇ ಅಪಸಕುನ! ನಮ್ಮದೆಯ್ಯ ದ್ಯಾವರಿಗೆ ಮುಟ್ಟುಚಟ್ಟಾದೆ, ಕೇರಿಗೆ ಕೇರಿನೇ ತೆಗೆದು ಬಿಡ್ತವೆ" (ಪು.101) ಎನ್ನುವಲ್ಲಿ ಸಣ್ಣನ ಅಜ್ಞಾನ ಮತ್ತು ಮೂಢನಂಬಿಕೆಗೆ ನಿದರ್ಶನವಾಗಿದೆ. ಕೆಲಸಕ್ಕೆ ಕರೆಯಲು ಬಂದಿದ್ದ ತಿಮ್ಮಪ್ಪ ಹೆಗ್ಗಡೆಯ ಕೂಗಿಗೆ ಪ್ರತಿಕ್ರಿಯೆಯಾಗಿ ಬಿಡಾರಗಳಲ್ಲಿದ್ದ ಮಂಜ, ತಿಮ್ಮ ಮತ್ತು ಬೈರರ ವರ್ತನೆಗಳನ್ನು ಇಲ್ಲಿ ಗಮನಿಸಬಹುದು. ಬೈರನು ತನ್ನಷ್ಟಕ್ಕೆ ತಾನೆ ಹೇಳಿಕೊಂಡನೆಂಬಂತೆ "ಕೂಗಿದ್ರೆ, ಕೂಗಿ! ಕೇಳಿಸ್ತದೆ ಗಲಾಟೆ ಇರಾಂವ ನಾನೊಬ್ಬ ಒಂದೀಟು ಗಂಜಿ ಗಿಂಜಿ ಮಾಡಿ ಕುಡಿಯಾಕಾದ್ರೂ ಸಮಯ ಬ್ಯಾಡೇನು? ಹೊತ್ತು ಮೂಡಾಕೆ ಮುಂಚೇನೆ ಬರ್ತಾರೆ ಕೆಲಸಕ್ಕೆ ಕರಿಯಾಕ" (ಪು.102) ಎಂದು ಗಟ್ಟಿಯಾಗಿಯೇ ಗೊಣಗಿದನು.

ಗುತ್ತಿ ತಿಮ್ಮಿಯನ್ನು ಅಪಹರಿಸಿಕೊಂಡು ಬರಲು ಸಿಂಬಾವಿಯಿಂದ ಲಕ್ಕುಂದ, ಮೇಗರವಳ್ಳಿ, ಹಳೆಮನೆಗಳನ್ನು ದಾಟಿಕೂಂಡು, ಬೆಟ್ಟಳ್ಳಿಗೆ ಹೋಗಬೇಕಾಗುತ್ತದೆ. ದಾರಿಯಲ್ಲಿ ಲಕ್ಕುಂದದ ಸೇಸ ನಾಯ್ಕನ ಮನೆ ಸಮೀಪಿಸುತ್ತಿದ್ದಂತೆ ಅವನ ಯೋಚನಾ ಲಹರಿಯೇ ಬದಲಾಗುತ್ತದೆ. ಹೊಟ್ಟೆಯ ಚಿಂತೆ ಅವನ ಮನಸ್ಸನ್ನು ಬದಲಿಸುತ್ತದೆ. ಸೇಸ ನಾಯ್ಕನ ಮನೆಯಲ್ಲಿ ತನಗೆ ಅನ್ನವಲ್ಲದಿದ್ದರೂ ಗಂಜಿಯಾದರೂ ದೊರೆಯಬಹುದೆಂಬ ಆಶಾ ಭಾವನೆಯ ಹಿಂದೆ ದಲಿತನೊಬ್ಬನ ಅನ್ನದ ಸಮಸ್ಯೆ ಇದೆ. "ಅನ್ನಾ ಇಲ್ದಿದ್ರೆ, ಗಂಜೀನಾದ್ರೂ ಹಾಕ್ದೆ ಇರ್ತಾರೇನು? ಹೆಗ್ಡೇರ್ ಮನೆ ಆಳೂ ಅಂತಾ" (ಪು.11) ಸೇಸ ನಾಯ್ಕನ ಮನೆಯ ಅಂಗಳಕ್ಕೆ ಬಂದ ಗುತ್ತಿ ಅವರಮನೆಯ ಮಾಂಸದ ಪಲ್ಯದ ವಾಸನೆಯನ್ನು ಕಳ್ಳು ಹೆಂಡಗಳ ಹುಳಿ ಗಂಪನ್ನೂ ಆಸ್ವಾದಿಸಿ ಮನಸ್ಸಿನಲ್ಲೇ ಸಂತೋಷ ಪಡುತ್ತಾನೆ. ಅಂಗಳದಲ್ಲಿ ನಿಂತ ಗುತ್ತಿಯನ್ನು ಸೇಸನಾಯ್ಕ ಜಗಲಿಗೆ ಬಂದು ಕೂಡುವಂತೆ ಹೇಳುತ್ತಾನಾದರೂ ಗುತ್ತಿಯ ಮನಸ್ಸನ್ನು ಹಸಿವು ವ್ಯಾಪಿಸಿರುವುದರಿಂದ ಅವನು ಹೊಟ್ಟೆ ಹಸಿವಿನ ಬಗೆಗೇ ಮಾತನಾಡುತ್ತಾನೆ.

'ಗುತ್ತಿ ನಿಂತಲ್ಲಿಂದ ಅಲುಗಾಡದೆ ಮೊದಲಿನಂತೆಯೆ ಬೆಪ್ಪು ನಗೆ ನಗುತ್ತಾ "ಇಲ್ಲ, ಅಷ್ಟೇನು ಹೊಟ್ಟೆ ಹಸಿದಿಲ್ಲ, ಸ್ವಲೂಪದಾವಾಗದೆ" ಎಂದು ತಟಸ್ಥವಾಗಿಯೆ ನಿಂತಿದ್ದ ನಾಯಿಯನ್ನು ಸುಮ್ಮನಿರು ಹುಲಿಯ!' ಎಂದು ಗದರಿಸಿದನು. "ಇಂತಹ ಸಂದರ್ಭದಲ್ಲಿ ಹಸಿವು ಮನುಷ್ಯನ ವರ್ತನೆಯನ್ನು ಸಂಪೂರ್ಣವಾಗಿ ನಿಯಂತ್ರಿಸುವುದನ್ನಿಲ್ಲಿ ಕಾಣಬಹುದು. ಈ

ಕಾದಂಬರಿಯಲ್ಲಿಯ ದಲಿತರ ಅಜ್ಞಾನ ಮತ್ತು ಮೂಢ ನಂಬಿಕೆಗಳು ಅಲ್ಲಲ್ಲಿ ಅಭಿವ್ಯಕ್ತವಾಗಿವೆ. ಗುತ್ತಿ ತಿಮ್ಮಿ ತನಗೆ ಒಲಿಯುವಂತೆ ಕಣ್ಣಾ ಪಂಡಿತರಿಂದ ತಾಯಿತ ಮಾಡಿಸಿ ತೋಳಿಗೆ ಕಟ್ಟಿಕೊಳ್ಳುತ್ತಾನೆ. ಗುತ್ತಿಗೆ ಪಂಡಿತರು ತನ್ನ ಮನಸ್ಸಿನ ರಹಸ್ಯವನ್ನೇ ಹೇಳಿದಂತಾಗಿ ಅವರ ಬಗ್ಗೆ ಇನ್ನಷ್ಟು ಭಯಭಕ್ತಿ ತಾಳುವಂತಾಗುತ್ತದೆ. "ಅಯ್ಯ ನೀವು ದೇವರಿಗೆ ಸಮ. ನನ್ನ ಮನಸ್ಸಿನಲ್ಲಿರೊಂದನ್ನ ನಾ ಹೇಳಬೇಕಿದೆ, ಮೊದಲೆ ನೀವು ಕೇಳಿ ಬಿಟ್ಟಿರಿ, ನಿಜವಾಗಿಯೂ ನೀವು ದೇವರಂಥಾ ಮನುಷ್ಯರು" (ಪು. 28) ಎನ್ನುವಲ್ಲಿ ಮುಗ್ಧ ಜನರ ಮನಸ್ಸಿನ ದುರ್ಬಲತೆಯನ್ನು ಗುರುತಿಸಿಕೊಂಡು ಆ ಮೂಲಕ ತಮ್ಮ ಪ್ರಭಾವ ಹಿರಿಮೆಯನ್ನು ಹೆಚ್ಚಿಸಿಕೊಳ್ಳುವ ಕಣ್ಣಾ ಪಂಡಿತರ ಶೋಷಣೆಯ ಮನಸ್ಥಿತಿಯನ್ನು ಕಾಣಬಹುದು. ಭೂತದ ಜಾಗದೊಳಗೆ ಅಸ್ಪೃಶ್ಯರು ಕಾಲಿಟ್ಟರೆ ಅವರಿಗೆ ಏನಾದರೂ ಕೇಡಾಗುತ್ತದೆಂಬ ನಂಬಿಕೆ ಹುಟ್ಟಿಸಿ ಮಲೆನಾಡಿನ ಜಮೀನ್ದಾರರು ತಮ್ಮ ತೋಟ, ಗದ್ದೆ, ಹಿತ್ತಲುಗಳ ಫಸಲು ರಕ್ಷಣೆ ಮಾಡಿಕೊಳ್ಳುತ್ತಿದ್ದರು. ಸುಬ್ಬಣ್ಣ ಹೆಗ್ಗಡೆಯ ಆಜ್ಞೆಯಂತೆ ಹಂದಿಯನ್ನು ಹಿಡಿಯಲು ಬೆನ್ನು ಹತ್ತಿದ್ದ ಹೊಲೆಯರು, ಹಂದಿ ತುಳಸಿ ಕಟ್ಟೆ ಕಡೆ ನುಗ್ಗಿದಾಗ ಹೆದರಿ ನಿಂತು ಬಿಡುತ್ತಾರೆ. "ಹಂದಿಯ ಹಿಂದೆ ಓಡುತ್ತಿದ್ದ ಹೊಲೆಯರೆಲ್ಲ ಹಂದಿದೇವರ ಕಡೆ ನುಗ್ಗಿದೊಡನ ಹೆದರಿ ಗಾಬರಿಯಾಗಿ ಮರಗಟ್ಟಿದಂತೆ ದೂರದಲ್ಲಿಯೇ ನಿಂತು ಬಿಟ್ಟಿದ್ದರು. ತಾವು ಹೋಗಬಾರದ ಜಾಗಕ್ಕೆ ಹಂದಿ ಹೋಯಿತಲ್ಲಾ ಎಂದು ವಿಷಾದದಿಂದಲೂ, ಅದಕ್ಕಿಂತ ಹೆಚ್ಚಾಗಿ ತಮಗೆ ಕೇಡು ತಪ್ಪದು ಎಂಬ ಪಾಪ ಭೀತಿಯಿಂದಲೂ ಅವರು ಕಂಗಾಲಾಗಿದ್ದರು." (ಪು. 109) ಎನ್ನುವಲ್ಲಿ ಮೇಲ್ಜಾತಿಯವರ ಪೂಜಾ ಸ್ಥಳ ಪ್ರವೇಶ ದಲಿತರಿಗೆ ನಿರ್ದಿಷ್ಟವಾದವುಗಳು ಎನ್ನುವುದನ್ನು ಸೂಚಿಸುತ್ತದೆ.

ದೇವರು–ದೆವ್ವಗಳ ಕುರಿತು ಮುನ್ನಡಿಸಿಕೊಂಡು ಬಂದ ನಂಬಿಕೆಗಳನ್ನು ಒಮ್ಮೊಮ್ಮೆ ತಮ್ಮ ಹಿತ ರಕ್ಷಣೆಗೆ ಬಳಸಿಕೊಳ್ಳುವ ಸಂದರ್ಭವೂ ಈ ಕಾದಂಬರಿಯಲ್ಲಿವೆ. ಬೆಟ್ಟಳ್ಳಿ ಕೇರಿಯಲ್ಲಿ ಕಾಣೆಯಾದ ತಿಮ್ಮಿಗಾಗಿ ಹುಡುಕಾಟ ನಡೆಯುತ್ತದೆ. ತಿಮ್ಮಿಯ ಸುಳಿವು ದೂರೆಯುವುದಿಲ್ಲ ಕೇರಿಯಲ್ಲಿ ಏನೇನೋ ಊಹಾ ಪೋಹಗಳು ಹುಟ್ಟಿಕೊಳ್ಳುತ್ತವೆ. ತಿಮ್ಮಿ ಕಾಣೆಯಾದ ಸಂಗತಿ ಸೇಸಿಗಲ್ಲದೆ ಬೇರೆಯವರಿಗೆ ತಿಳಿದಿರುವುದಿಲ್ಲ. ದೊಡ್ಡ ಬೀರ ತುಂಬಾ ಚಡಪಡಿಸುತ್ತಾನೆ. ಆಗ ಸೇಸಿಯ ಮೈಯಲ್ಲಿ ಜಕಣಿ ಬಂದು ಅವಳು ಹೇಳಿಕೆ ಕೊಡುತ್ತಾಳೆ. "ಹೂಂಹಿಂಹೂಂ, 'ಜಾತಿ ಕೆಟ್ಟು – ನೀತಿ ಕೆಟ್ಟು ಕೇರಿಗೆಲ್ಲ ಮುಟ್ಟು ಚಿಟ್ಟು ಹಲಸಿನ ಮರದ ಮೇಲೆ ನನ್ನ ಜುಟ್ಟು' ನಾವೇ ಅಡಗಿಸಿದ್ದೇನೆ ಹೆದರ ಬೇಡಿ ನನಗೆ ಅಯಾರ ಕೊಟ್ಟು ಪೂಜೆ ಮಾಡಿ ಹೋದ ಹೆಣ್ಣು ಕೂದಲು ಕೊಂಕದೆ ಬರುತ್ತದೆ ಹೂಂಹಿಂಹೂಂ" (ಪು. 165) ದಲಿತರಲ್ಲಿಯೂ ಮನುಷ್ಯ ಪ್ರೇಮದ ಮಾನವೀಯ ಗುಣಗಳನ್ನು ಕಾಣುವಂತಹ ಪ್ರಸಂಗ ಈ ಕಾದಂಬರಿಯಲ್ಲಿ ವರ್ಣಿತವಾಗಿದೆ. ಮುಕುಂದಯ್ಯ ಗುತ್ತಿಯ ನಾಯಿಯನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಗುತ್ತಿ ಮುಕುಂದಯ್ಯ ಕೊಟ್ಟಿದ್ದ ಸಾಮಾನು, ರೂಪಾಯಿ ಎಲ್ಲವನ್ನು ಹಿಂದಕ್ಕೆ ಕೊಟ್ಟು "ನನಗೆ ನಾಯಿಯನ್ನು ಕೊಡದಿದ್ದರೂ ಚಿಂತೆಯಿಲ್ಲ, ಅದನ್ನು ಮಾರಿ ಬಿಟ್ಟೆ ಎಂದು ನನ್ನ ಮನಸ್ಸಿಗೆ ಇಷ್ಟ ಆಗಬಾರದು, ಆದ್ದರಿಂದ ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ. ಈ ಸಾಮಾನನ್ನೆಲ್ಲ ಹಿಂದಕ್ಕೆ ತೆಗೆದುಕೊಳ್ಳಿ" (ಪು.126) ಎನ್ನುವ ಗುತ್ತಿಯ ಅಂತಃಕರಣದ ಮಾತು ಮುಕುಂದಯ್ಯ ಗುತ್ತಿಗಿಂತ ಎಷ್ಟು ಕೀಳು ಎಂಬುದನ್ನು ಸೂಚಿಸುತ್ತದೆ. ಈ ಸಮಾಜ ಯಶಶ್ಚಿತ ಎಂದು ತಿಳಿದಿರುವ ವ್ಯಕ್ತಿಯಲ್ಲಿ ಅಸಾಮಾನ್ಯವಾದ ಮಾನವೀಯ ಗುಣಗಳನ್ನು ಕಾಣುತ್ತೇವೆ. ಯಾವ ಜಾತಿಯವರಾದರೂ ಕೂಡ ಕೆಟ್ಟದ್ದನ್ನು ಒಂದಲ್ಲಾ ಒಂದು ವಿಧದಲ್ಲಿ ನಿಷ್ಠುರವಾಗಿ ಟೀಕಿಸುವ ಅಧಿಕಾರ ಈ ಕಾದಂಬರಿಯಲ್ಲಿ ಕಾಣುತ್ತೇವೆ. ಉದಾಹರಣೆಗೆ 'ಚಿಕ್ಕಂದಿನಿಂದಲೂ ಮೆಚ್ಚಿಕೊಂಡು ಬಂದಿದ್ದ ತನ್ನ ಒಡೆಯ ದೊಡ್ಡಣ್ಣ ಹೆಗ್ಗಡೆಯವರ ಶವ ಗಾಡಿಯ ಮೇಲೆ ಬರುತ್ತಿದೆ ಎಂಬ ಸುದ್ದಿ ಕೇಳಿ ಮಂಜ ತಿಮ್ಮಪ್ಪ ಹೆಗ್ಗಡೆಯ ನೀಚತನವನ್ನು ಮುಲಾಜಿಲ್ಲದೆ ಬಯಲಿಗೆಳೆಯುತ್ತಾನೆ. "ಯಾರಿಗೇನು ಗೊತ್ತಿಲ್ಲೇನು ಇವರ ಹಣೇಬರಾ? ಇವರ ಕುಲಗೆಟ್ಟ ಅನಾಚಾರಾನ ಯಾರ ಹತ್ರ ಮುಚ್ಚಿಡ್ತಾರಂತೆ?.... ಯಾರಾದರೂ ಸ್ವೆ ಹೆಣ್ ಜಾತಿ ಆಗಿಬಿಟ್ರೆ ಆತು, ಮನೇ ಕೆಲಸಕ್ಕಿರೋ ಆ ಹಳೇ ಪೈಕದ ಹೂವಿ, ಹಡಬೇ ಹಾದರಗಿತ್ತಿ ಅದನ್ನು ಪೂರೈಸಿ ಈಗ ನಮ್ಮಿ ಕೇರಿಗೇ ಕೈ ಹಾಕ್ಯಾರೆ" ಎನ್ನುವ ಮಾತು ದಲಿತರ ಮೇಲೆ ಮೇಲ್ವರ್ಗದವರ ಕ್ರೂರ ದಬ್ಬಾಳಿಕೆಗೆ ಪ್ರತಿಕ್ರಿಯೆಯಾಗಿದೆ. ಲೈಂಗಿಕ ಶೋಷಣೆಗೆ ಪ್ರತಿರೋಧವನ್ನು ಕಾಣುತ್ತೇವೆ. ಕಲ್ಲಯ್ಯ ಗೌಡರು ಕೋಪಗೊಂಡು ಸಣ್ಣ ಬೀರನನ್ನು ಹೊನ್ನಾಳಿ ಸಾಬರಿಂದ ಮೂರ್ಛೆ ಹೋಗುವಂತೆ ಹೊಡೆಸುತ್ತಾರೆ. ಮಗನನ್ನು ಗೌಡರು ಹೊಡೆಸಿ ಕೊಂದು ಹಾಕುತ್ತಾರೆಂದು ಹೆದರಿದ ಸೇಸಿ ಓಡಿ ಬಂದು ಮಗನನ್ನು ಬಿಡಿಸಿಕೊಳ್ಳುತ್ತಾಳೆ. ತಿಮ್ಮಿಯನ್ನು ತಂದು ಒಪ್ಪಿಸುವುದಾಗಿ ಗೌಡರಿಗೆ ಮಾತು ಕೊಡುತ್ತಾಳೆ. ಇದರಿಂದ ದಲಿತರು ತಮ್ಮ ಮಕ್ಕಳ ವಿವಾಹ ವಿಷಯದಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಂತಿರಲಿಲ್ಲ ಎಂಬುದು ಮನವರಿಕೆಯಾಗುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಚಿನ್ನಮ್ಮನ ಮದುವೆಯಲ್ಲಿ ಹೊಲಗೇರಿಯ ಮಂಜ, ತಿಮ್ಮ, ಸಿದ್ದ, ಭೈರ ಇವರು ವಾಲಗ ಊದುತ್ತಿದ್ದರು. ಅಲ್ಲಿ ಗೌಡರ ಮಕ್ಕಳಾದ ಕಾಡು, ತಮ್ಮು ಮತ್ತು ಧರ್ಮು ಓಡಾಡುತ್ತಿದ್ದರು. ವಾಲಗವನ್ನು ಆಲಿಸಿದ ತಿಮ್ಮುಗೆ ತುಂಬ ಅವಮಾನವಾದಂತಾಯಿತು. ಕೀಳು ಜಾತಿಯ ಹೊಲೆಯನಾಗಿ, ದನ ಕಾಯುವವನಾಗಿ, ಗೊಬ್ಬರ ಗಿಬ್ಬರ ಹೊಲ, ಗದ್ದೆ, ತೋಟಗಳಲ್ಲಿ ತಾವು ಹೇಳಿದಂತೆ ಕೆಲಸ ಮಾಡಿಕೊಂಡಿರುವ 'ಬಾಡು ತಿನ್ನುವ' ಜೀತದಾಳೊಬ್ಬನ ಮುಂದೆ ಅವನು (ತಿಮ್ಮು) ಊದುತ್ತಿದ್ದ ವಾಲಗವನ್ನು ಬೆರಗಾಗಿ ಮೆಚ್ಚಿ ಆಲಿಸುತ್ತಿದ್ದುದು ತನ್ನ ಗೌಡಿಕೆಯ ಗೌರವಕ್ಕೆ ಮಸಿ ಬಳಿದುಕೊಂಡಂತಾಯ್ತಲ್ಲಾ ಎಂದು ಮುಖ ಸಣ್ಣಗೆ ಮಾಡಿಕೊಂಡನು, "ಥೂ ಹೊಲೇರ ಕೈಲಿ ಯಾರಾದರೂ ಮದುವೆ ಮನೆ ವಾಲಗ ಊದಿಸ್ತಾರೇನೋ" (ಪು..539) ಈ ಸನ್ನಿವೇಶ ಬಾಲ್ಯಾವಸ್ಥೆಯಲ್ಲೆ ಜಮೀನ್ದಾರಿಕೆಯ ಪಿತ್ತ ನೆತ್ತಿಗೇರಿರುವುದನ್ನು ದಲಿತರ ಬಗೆಗಿನ ಕೀಳು ಅಭಿರುಚಿಯನ್ನುಈ ಪ್ರಸಂಗ ಸೂಚಿಸುತ್ತದೆ.

ಅತ್ಯಮೂಲ್ಯವಾದ ಪದಾರ್ಥವನ್ನು ಅತಿ ಪ್ರಯಾಸದಿಂದ ಸಾಗಿಸುವ ಸಾಹಸದ 'ಓಡುಹುಳು' ವಿನಸೂಕ್ಷ್ಮ ಶ್ರಮಕ್ಕೆ ಗುತ್ತಿಯ ಬದುಕಿನ ಆಯಾಮಗಳನ್ನು ಕುವೆಂಪು ಸಮೀಕರಿಸುತ್ತಾರೆ. ಗುತ್ತಿಗೆ ಒಂದಾದ ಮೇಲೊಂದರಂತೆ ಕಷ್ಟಗಳು ಬರುತ್ತವೆ. ದಿಕ್ಕು ತೋಚದಂತಾಗಿ ಕಾಡಿನ ಮಧ್ಯೆ ಒರಟು ಒರಟಾಗಿ ಪ್ರಾರ್ಥನೆ ಮಾಡುತ್ತಾನೆ. ತನ್ನ ಕಷ್ಟಗಳಿಗೆ ಹಿಂದಿನ ಜನ್ಮದಲ್ಲಿ ತಾನು ಮಾಡಿದ ಪಾಪಗಳೇ ಕಾರಣವಾಗಿರಬಹುದೆಂದು ತರ್ಕಿಸುತ್ತಾನೆ. ಅದೇ ಕ್ಷಣದಲ್ಲಿ ಅವನಿಗೆ ಹೊಳೆದ ಇನ್ನೊಂದು ವಿಚಾರವೆಂದರೆ 'ತನ್ನ ಜಾತಿಯೇ ತನ್ನ ಈ ಎಲ್ಲಾ ಕಷ್ಟಗಳಿಗೆ ಕಾರಣವಾಗಿರಬಹುದೆ? ಎಂಬುದಾಗಿತ್ತು. "ನಾನು ಹೊಲೆರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹಿಂಗಾಗ್ತಿತ್ತೆ? ಎಂದುಕೊಂಡನು. ಗೌಡರ ಜಾತಿಗೆ, ಶೆಟ್ಟರ ಜಾತಿಗೆ ಬರಾಂಬರ ಜಾತಿಗೆ ಉಂಹ್ಞೂ ಈ ಜಲ್ಮದಾಗೆ ಅದೆಲ್ಲಿ ಸಾಧ್ಯ? ... ಸಾಬರ ಜಾತಿಗೆ? ಕಿಲಸ್ತರ ಜಾತಿಗೆ? ಥೂ ಥೂ ಥೂ! ತನ್ನ ತಲೆಯಲ್ಲಿ ಸುಳಿದಿದ್ದ ಏನನ್ನೊ ಉಗುಳಿ ನಿರಾಕರಿಸಿದನು" (ಪು. 506)... 'ಕೊನೆಗೆ ಹೊಲೆಯನ ಕುಲ ದೇವರಿಗೂ ಬೇಡವಾದ ಕುಲ' ಎಂದು ತನ್ನ ಜಾತಿಯ ಮೇಲೆ ಸಿಟ್ಟು ಮಾಡಿಕೊಳ್ಳುತ್ತಾನೆ. ಗುತ್ತಿ ತಿಮ್ಮಿಯನ್ನು ಹಾರಿಸಿಕೊಂಡು ಬರುವುದು, ಪೊಲೀಸರ ಕಣ್ಣು ತಪ್ಪಿಸಿಕೊಂಡು ಓಡಿ ಹೋಗುವಾಗಿನ ಸಂದರ್ಭ, ಇಜಾರದ ಸಾಬಿ ಸಣ್ಣ ಬೀರನನ್ನು ಕಟ್ಟಿ ಹುಣಸೆ ಬರಲಿನಿಂದ ಹೊಡೆಯುವುದು, ಗುತ್ತಿಯ ನಾಯಿ ಪ್ರವಾಹದಲ್ಲಿ ಕೊಚ್ಚಿ ಹೋಗುವುದು ಇವೆಲ್ಲ ಕುವೆಂಪು ಚಿತ್ರಿಸಿರುವ ದಲಿತ ಸಂವೇದನೆಯ ಜೀವಂತ ಘಟನೆಗಳಾಗಿವೆ.

ಪ್ರೀತಿ–ಪ್ರಣಯ ಸನ್ನಿವೇಶಗಳಲ್ಲಿ ದಲಿತ ಪಾತ್ರಕ್ಕೆ ಮನಸ್ಥಿತಿಗಳನ್ನು ಕುವೆಂಪು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಹೊಸ ಗನ್ನಡ ಗದ್ಯ ಸಾಹಿತ್ಯದಲ್ಲಿ ಹೊಲೆಯರ ಗುತ್ತಿ ಮತ್ತು ತಿಮ್ಮಿಯರ ಪ್ರಣಯ ಪ್ರಸಂಗ ಅಪೂರ್ವವಾದದ್ದು. ಬೆಟ್ಟಳ್ಳಿ ಕೇರಿಯ ತಿಮ್ಮಿಯನ್ನು ಗುತ್ತಿ ಅವಳ ಒಪ್ಪಿಗೆಯಿಂದಲೇ ಅಪಹರಿಸಿಕೊಂಡು ಕಗ್ಗತ್ತಲೆಯ ಭಯಂಕರ ಕಾಡಿನ ನಡುವೆ ಹೊರಟು ಬಿಡುತ್ತಾನೆ. ಕಗ್ಗತ್ತಲೆಯಲ್ಲಿ ಈ ಇಬ್ಬರು ಪ್ರಣಯಿಗಳು ಕಳೆದ ರಮ್ಯಾದ್ಭುತ ಮೊದಲ ರಾತ್ರಿ ಮರೆಯಲಾರದ್ದು, ಅವರಿಬ್ಬರ ಪ್ರಣಯ ಸಂಬಂಧಿ ಸರಸ ಸಲ್ಲಾಪದ ಸಂಭಾಷಣೆಗಳು, ವಿರಸದ ಹುಸಿ ಮುನಿಸಗಳು ತುಂಬ ನೈಜವಾಗಿ ಮೂಡಿವೆ. "ಹುಲಿಕಲ್ಲು ನೆತ್ತಿಗೆ ಏರಿದರು" (ಪು.223), ಬಚ್ಚನೊಂದಿಗೆ ಮದುವೆ ಒಲ್ಲದೆ ಒಲಿದವನೊಂದಿಗೆ ಓಡಿ ಬಂದಿದ್ದ ತಿಮ್ಮಿ ಬಿಗುಮಾನ ಬಿಡದೆ ಗುತ್ತಿಯ ಕಂಬಳಿಯಲ್ಲಿ ತಾನು ಮಲಗಲಾರೆನೆಂದು ಸಂಕೋಚದಿಂದ ದೂರ ಸರಿದು ನೆಲದ ಮೇಲೆ ಮಲಗಿ ನಿದ್ರಿಸುತ್ತಾಳೆ. ರಾತ್ರಿಯ ಚಳಿಗೆ ಮೈ ನಡುಗಿ, ಮಗ್ಗಲು, ಬದಲಾಯಿಸಿದಾಗ ಗುತ್ತಿ ಅವಳಿಗೆ ಕಂಬಳಿ ಹೊದಿಸಿ ಹತ್ತಿರಕ್ಕೆ ಎಳೆದುಕೊಳ್ಳುತ್ತಾನೆ. ಮಲಗುವುದಕ್ಕೆ ಮುಂಚೆ ಅವರಲ್ಲಿ ನಡೆದ ಸಂಭಾಷಣೆಯ ಸ್ವಾರಸ್ಯ ಹೀಗಿತ್ತು "ಅಲ್ಲೇ ನನ್ನ ಕಂಬಳಿ ಹಾಸಿಕೊಂಡು ಮನಿಕ್ಕೊಳ್ಳೆ" ಎಂದನು ಅವಳು ಬರುವಾಗ ಬುತ್ತಿ ತಂದಿದ್ದಳೆ ಹೊರತು ಕಂಬಳಿ ತಂದಿರಲಿಲ್ಲ. ಅವನ ಕಂಬಳಿಯನ್ನು ತಾನು, ಹಾಸಿಕೊಂಡರೆ ಅವನು ಕಲ್ಲಿನ ಮೇಲೆ ಮಲಗಬೇಕಾಗುತ್ತದೆ. ಇಲ್ಲದಿದ್ದರೆ? ಅವನೆಲ್ಲಿಯಾದರೂ ತನ್ನ ಮಗ್ಗುಲಲ್ಲಿಯೆ ಮಲಗಿ ಬಿಟ್ಟರೆ. ಕಂಬಳಿ ತನ್ನದೆಂದು? ತಿಮ್ಮಿಯ ತಲೆಯಲ್ಲಿ ಏನೇನೊ ಸುಳಿಯಿತು. ಅವಳೆಂದಳು ದಾಕ್ಷಿಣ್ಯದ ಮೆಲುದನಿಯಲ್ಲಿ "ಕಂಬಳಿ ಬ್ಯಾಡ ಅವ್ವ ಕೊಟ್ಟ ಗಂಟಿನಲ್ಲಿ ಒಂದು ಸೀರೆಯಿದೆ. ಅದೇ ಸಾಕು ಎಂದಳು." ನೋಡು... ಬೆಳಗಿನ ಜಾವ ಪೂರಾ ಚಳಿ ಆಗ್ತದೆ ಕಾವಣ ಬಿದ್ದಂಗ ಬೀಳ ಬೈದು, ಶೀತಾಗೀತಾ ಆಗಿ ಜರಾಗಿರಾ ಬಂದ್ರೆ, ನನ್ನ ಮಾತಿಲ್ಲ ಅಮ್ಯಾಲೆ ನಿನ್ನವ್ವ ನನ್ನ ಬೈತದೆ...

"ನಿಂಗೇ ಬ್ಯಾಡೇನು ಕಂಬಳಿ"?

"ಬೇಕು"

"ಮತ್ತೆ? ಇಬ್ಬರೂ ಒಂದೇ ಕಂಬಳೀಲಿ ಹ್ಯಾಂಗೆ ಮಲಗಾದು?

ಇಟ್ಟೆ ಸೈಯಾ? ಮೂರು ಜನ ಬೇಕಾದ್ರೂ ಮನಗಬ್ಬೈದು, ಅದೇನು ಚಿಕ್ಕ ಗಂಬಳಿ ಅಂತಾ ಮಾಡೀಯಾ! ಹೆಗ್ಗಂಬಳಿ "ಬೇಕಾದರೆ ಬಿಚ್ಚಿ ಹಾಸಿ ನೋಡು"

"ನಾ ಒಲ್ಲೆ ನಿನ್ನ ಜತೆ ಮನಗಾಕೆ"

ಅಲ್ಲೇ ತಿಮ್ಮಿ ನೀ ನನ್ನ ಮದೆವೇ ಆದ ಮ್ಯಾಲೆ ಮಗ್ಲಾಗೆ ಮನಗ್ತಿಯೋ ಇಲ್ಲೋ. . .

"ಏನಿಂಗೇನು ನಾಚಿಗೇನ ಇಲ್ಲಾ? ಭಂಡ ಮಾತು ಆಡ್ತೀಯಿಲ್ಲಾ! ನಾಳೆ ಅತ್ತೆಮ್ಮನ ಹತ್ರ ಹೇಳ್ದೇ ಇದ್ದರೆ ಕೇಳಿದ... ಆಗ್ಲೆ ಅತ್ತೆಮ್ಮಗೆ ಹೇಳ್ತೀನಿ ಅಂತಿಯಲ್ಲಾ ನೀಮಾಹುಸಾರಿನ ಹುಡುಗಿ ಕಣೇ"(ಪುಟ. 226)

ರಾತ್ರಿ ಕಳೆದು ಮುಂಜಾನೆ ಎಚ್ಚರವಾದಾಗ ಇಡೀ ಬೆಟ್ಟವನ್ನೇ ಆವರಿಸಿ ನಿಂತ ಮಂಜು ನಡು ನಡುವೆ ತಲೆ ಎತ್ತಿ ನಿಂತ ಹಸಿರು ಮಲೆ. ಪೂರ್ವ ದಿಂಗತದಲ್ಲಿ ಕೆಂಡದುಂಡೆಯಾಗಿ ಮೇಲೇಳುತ್ತಿದ್ದ ಸೂರ್ಯನನ್ನು ನೋಡಿ ತಿಮ್ಮಿ ಭಾವ ಪರವಶಳಾಗುತ್ತಾಳೆ. ಗುತ್ತಿಯ ನಾಯಿ ಹುಲಿಯ ಕುರ್ಕನೊಂದಿಗೆ ಹೋರಾಡಿದ್ದರಿಂದ ಗಾಯವಾಗಿ, ನಡೆಯಲಾರದೆ ನರಳುವುದನ್ನು ನೋಡಿ ಗುತ್ತಿಗೆ ಸಂಕಟವಾಗುತ್ತದೆ.

"ಸನಿಮುಂಡೆ ನಿನ್ನ ದೆಸಿಂದ ನನ್ನ ನಾಯೀನೂ ಹೋಯ್ತಲ್ಲೆ! ಯಾವ ಇಸಗಳಿಗೇಲಿ ಹುಟ್ಟುದ್ಯೋ ನೀನು, ಹುಲಿಯನ ತಿನ್ನಾಕೆ" ಎಂದು ಸಿಡುಕಿದನು. ತಕ್ಷಣವೇ ಬಂಡೆಯ ಬೆಟ್ಟ–ದನಿಗೆ ಮರುದನಿ ಹೊಡುವಂತೆ ನಿಸರ್ಗ ಸಹಜವಾದ ಪ್ರತಿಕ್ರಿಯೆಯಲ್ಲಿ ತಿಮ್ಮಿ ಹೇಳಿದಳು "ನಾನ್ಯಾಕೆ ಆದೇನು ಸನಿಮುಂಡೆ? ಬೇಕಾದರೆ ನೀನೆ ಆಗು ಸನಿಮುಂಡೆಗಂಡ" (ಪು. 333) ಹೀಗೆ ತಿಮ್ಮಿಯ ಸಲುವಾಗಿ ಗುತ್ತಿ ನಾನಾ ಕಷ್ಟಗಳನ್ನು ಅನುಭವಿಸಿ ಅವಳನ್ನು ಒಲಿಯುವಂತೆ ಮಾಡಿಕೊಳ್ಳುವ ಸಾಹಸ ಪ್ರಯತ್ನದ ಸಂಭಾಷಣೆ ದಲಿತ ಬದುಕಿನ ದಟ್ಟ ಪ್ರೇಮದ ಪಡಿ–ನುಡಿಗಳಾಗಿವೆ. ಹೀಗೆ ಈ ಎರಡೂ ಕಾದಂಬರಿಗಳಲ್ಲಿ ಬರುವ ದಲಿತ ಸಂವೇದನೆಯನ್ನು ಸಮಗ್ರವಾಗಿ ಗುರುತಿಸುವ ಪ್ರಯತ್ನವಾಗಿಲ್ಲವಾದರು ಪ್ರಾತಿನಿಧಿಕ ಘಟನೆ, ಸನ್ನಿವೇಶ, ಪಾತ್ರ ಪ್ರಸಂಗಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಮೇಲ್ಜಾತಿಯವರು ದಲಿತರ ಬಗೆಗೆ ತಾಳುವ ಮನಸ್ಥಿತಿಗಳ ಪ್ರತಿಕ್ರಿಯೆಗಳಿಗಿಂತ ದಲಿತರ ನೆಲೆಯಲ್ಲಿ ಅವರು ಭಾವಿಸುವ ವ್ಯಕ್ತಿ, ಘಟನೆ, ಸನ್ನಿವೇಶಗಳ ಸಂದರ್ಭದಲ್ಲಿ ದಲಿತ ಸಂವೇದನೆಯನ್ನು ಶೋಧಿಸಲಾಗಿದೆ.

'ದಲಿತ ಸಂವೇದನೆ' ಕುರಿತಾಗಿ ತುಂಬಾ ಹಿಂದಿನಿಂದಲೂ ಕನ್ನಡದ ಕವಿಗಳು ತಮ್ಮ ಲಕ್ಷ್ಯವನ್ನು ಹರಿಸಿದ್ದಾರೆ. ಪಂಪನಿಂದ – ಕುವೆಂಪುವರೆಗೂ ಅಲ್ಲಲ್ಲಿ ಜಾತಿಯ ಸಮಸ್ಯೆ, ಅದರಿಂದಾಗುವ ನೋವು, ಅಪಮಾನಗಳನ್ನು ಸಹಾನುಭೂತಿಯಿಂದ ನೋಡಿರುವುದು ಕಂಡು ಬರುತ್ತದೆ. ಹೀಗಿದ್ದರೂ ಕುವೆಂಪು ಕಾದಂಬರಿಗಳ ಬಗೆಗೆ ಮಿಶ್ರ ಪ್ರತಿಕ್ರಿಯೆಗಳು ಬಂದಿವೆ. ಅನೇಕ ವಿಮರ್ಶಕರು ತಕರಾರುಗಳನ್ನು ತೆಗೆದಿದ್ದಾರೆ. ಈ ಕುರಿತು ಸಾಕಷ್ಟು ವಾದ ವಿವಾದಗಳು ನಡೆದಿವೆ. ಅವುಗಳ ಬಗ್ಗೆ ಚರ್ಚೆ ಇಲ್ಲಿ ಅನಗತ್ಯ, ನಿರ್ದಿಷ್ಟವಾಗಿ 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರ' ಲೇಖನವನ್ನು ಬರೆದ ಪ್ರೊ. ಬಿ. ಕೃಷ್ಣಪ್ಪ ಅವರು "ಕುವೆಂಪು ತಮ್ಮ ಕಾದಂಬರಿಗಳಲ್ಲಿ ದಲಿತರ ಪರಿಸ್ಥಿತಿಗಳನ್ನು ವರ್ಣಿಸುತ್ತಾರಾದರೂ ಅವರ ಅಂತಃಕರಣವೆಲ್ಲ ಊಳಿಗಮಾನ್ಯ ಜಮೀನುದಾರರ, ಗೌಡರ ಪರವಾಗಿದ್ದು ಬ್ರಾಹ್ಮಣ ವಿರೋಧಿಯಾಗಿದೆಯೇ ಹೊರತು ದಲಿತ ಪರವಾಗಿಲ್ಲ ಎಂದಿದ್ದಾರೆ". ಈ ವಾದದ ಸಮರ್ಥನೆಗಾಗಿ ಕಾದಂಬರಿಗಳಿಂದ ಕೆಲವು ಪ್ರಸಂಗಗಳನ್ನು ಎತ್ತಿ ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ 'ಹೊನ್ನಾಳಿಹೊಡ್ತ'ದ ಪ್ರಸಂಗ, ಇವರ ಪ್ರತಿಕ್ರಿಯೆಗಳನ್ನು ಒಂದು ನೆಲೆಯಲ್ಲಿ ಸಕರಾತ್ಮವಾಗಿ ಚಿಂತಿಸುವುದಾದರೂ ಕವಿಯ ನಿರ್ದಿಷ್ಟವಾದ ಕಲಾತ್ಮಕತೆಯ ಹಿನ್ನೆಲೆಯಲ್ಲಿ ನೋಡಿದಾಗ ಅದು ಮತ್ತೊಂದು ರೀತಿಯಾಗಿ ಕಾಣಬಹುದು. ಕುವೆಂಪು ಅವರೇ ಈ ಕಾದಂಬರಿಯ ಪ್ರಾರಂಭದಲ್ಲಿ ಹೇಳುವಂತೆ ಇಲ್ಲಿ "ಯಾರೂ ಮುಖ್ಯರಲ್ಲ.... ಯಾವೂದೂ ಯಃಕಶ್ಚಿತವಲ್ಲ ಯಾವುದು ಎಲ್ಲಿಯೂ ನಿಲ್ಲುವುದಿಲ್ಲ, ಎಲ್ಲಕ್ಕೂ ಇದೆ ಅರ್ಥ, ಎನ್ನುವ ಮಾತುಗಳು ಕಾದಂಬರಿಗರಿಗೆ ಕನ್ನಡಿ ಹಿಡಿದಂತಿವೆ. ಜೀತದಾಳುಗಳನ್ನು

ಧಣಿಯರು ಹಿಂದಿನಿಂದಲೂ ದೈಹಿಕ ಹಿಂಸೆಗೆ ಒಳಗು ಮಾಡಿಕೊಂಡು ಬಂದಿದ್ದಾರೆ. ಯಾರದೋ ತಪ್ಪಿಗೆ ಯಾರೋ ಶಿಕ್ಷೆ ಅನುಭವಿಸಬೇಕಾಗಿ ಬಂದದ್ದನ್ನು ಹೇಳುತ್ತದೆ. ಹಾಗೆ ನೋಡಿದರೆ ತಿಮ್ಮಿಯೂ ಅಪರಾಧಿಯಲ್ಲ. ತಾನು ಮೆಚ್ಚಿದ ವನಸಂಗಡ ಓಡಿ ಹೋದದ್ದು ತಪ್ಪೆ? ತಿಮ್ಮಿ ಓಡಿ ಹೋದ ಕಾರಣಕ್ಕೆ ಸಣ್ಣ ಬೀರನನ್ನು ಅಮಾನುಷವಾಗಿ ದಂಡಿಸುವ ದಣಿಗಳ ಕಾರ್ಯವನ್ನು ಕುವೆಂಪು ವರ್ಣಿಸಿರುವುದು ಕ್ರೌರ್ಯಕ್ಕೆ ಒಳಗಾದವನ ಮೇಲಿನ ಅಂತಃಕರಣದಿಂದವೆಂಬುದು ಇಲ್ಲಿ ಮುಖ್ಯವಾದ ಅಂಶವಾಗಿದೆ.

'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್'

ಎಂಬ ಕುವೆಂಪು ಅವರ ಧೋರಣೆ, ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿಯನ್ನು ಕಂಡರಿಸುವ ಸಮತಾಭಾವ ಇವರ ಕಾದಂಬರಿಗೂ ಅನ್ವಯವಾಗುತ್ತವೆ. "ಕುವೆಂಪು ಅವರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ದಲಿತ ಪಾತ್ರಗಳು ಸ್ವತಂತ್ರ ಅಸ್ತಿತ್ವ ವಿರುವ ಪಾತ್ರಗಳಾಗಿವೆ. ಸಾಮಾಜಿಕ ಅನುಶ್ರೇಣಿಯಲ್ಲಿ ಮೇಲು–ಕೀಳು ಎಂಬ ಭೇದ ಭಾವಗಳಿದ್ದರೂ ವಾಸ್ತವ ಜೀವನದಲ್ಲಿ ಒಬ್ಬರನೊಬ್ಬರು ಅವಲಂಬಿಸಬೇಕಾದ ಪರಿಸ್ಥಿತಿಗಳನ್ನು ಕುವೆಂಪು ಈ ಕಾದಂಬರಿಗಳಲ್ಲಿ ಪ್ರತಿಪಾದಿಸಿದ್ದಾರೆ" ಎನ್ನುವ ಪ್ರೊ. ಕೆ. ಆರ್. ದುರ್ಗಾದಾಸ್ ಅವರ ಅಭಿಪ್ರಾಯವನ್ನು ಒಪ್ಪಬಹುದು. ಸಮಾಜದಲ್ಲಿ ತಾತ್ಸರಕ್ಕೆ ಗುರಿಯಾದ ಕೆಳವರ್ಗದ ಜನಗಳಲ್ಲಿಯೂ ಮನುಷ್ಯ ಸಹಜ ಪ್ರೀತಿ, ಸ್ವಾಭಿಮಾನ, ಸಾಹಸ ಮತ್ತು ತ್ಯಾಗದಂತಹ ಗುಣಗಳಿರುವುದನ್ನು ಕುವೆಂಪು ಕಾದಂಬರಿಗಳ ಮೂಲಕ ಪರಿಚಯಿಸುತ್ತಾರೆ. ಮುಖ್ಯವಾಗಿ ಒಕ್ಕಲಿಗ ಸಮುದಾಯದ ಭೂಮಾಲೀಕರ ಜೀವನವನ್ನು ಮಾತ್ರ ದಾಖಲಿಸುವ ಉದ್ದೇಶ ಹೊಂದಿರದೆ ಅವರ ಬದುಕಿಗೆ ಹಾಸುಹೊಕ್ಕಾಗಿರುವ ದಲಿತರ ಜೀವನ ಕ್ರಮಗಳನ್ನು ಕೌಟುಂಬಿಕ ಸಂಗತಿಗಳನ್ನು ಪ್ರೀತಿ–ಪ್ರೇಮ, ದೌರ್ಜನ್ಯ, ಹಿಂಸೆ, ಪ್ರತಿಭಟನೆ ಮೊದಲಾದವುಗಳನ್ನು ಜೀವಂತವಾಗಿ ಸೆರೆ ಹಿಡಿದಿದ್ದಾರೆ. ದಲಿತರನ್ನು ಹೊರತುಪಡಿಸಿ ಯಾವುದೇ ಸಮಾಜವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯವೆಂಬಂತೆ ಈ ಕಾದಂಬರಿಗಳ ಒಟ್ಟು ಚಿತ್ರಣವಿದೆ.

ಕುವೆಂಪು ಕಾದಂಬರಿಗಳಲ್ಲಿ ಬರುವ ದಲಿತ ಪಾತ್ರಗಳ ಬಗ್ಗೆ ಧರಣೀದೇವಿ ಮಾಲಗತ್ತಿಯವರು ಬರೆಯುತ್ತಾ "ದಲಿತ ಪಾತ್ರಗಳ ಬಗೆಗೆ ತುಂಬ ಅನುಕಂಪದಿಂದ ಕುವೆಂಪು ವ್ಯವಹರಿಸುತ್ತಾರೆ. ಆ ಪಾತ್ರಗಳು ಸ್ವಾಮಿನಿಷ್ಠೆ ಅಥವಾ ಭಯಭಕ್ತಿ ಅಸಹಾಯಕತೆಯ ಮೂಲ ರೂಪಗಳು 'ಕೆಲವು ಶೂದ್ರ ಪಾತ್ರಗಳಲ್ಲಿ ಬರುವ ಸತ್ವ ಪ್ರಜ್ಞಾ ಪೂರ್ವಕವಾದ ಸ್ವಂತ ಅಸ್ತಿತ್ವದ ಕಲ್ಪನೆ ಅವುಗಳಿಗಿದ್ದ ಹಾಗೆ ಕಾಣುವುದಿಲ್ಲ. ಒಂದು ರೀತಿಯಲ್ಲಿ ಶೂದ್ರ ಕೇಂದ್ರಿತ ಪಾತ್ರಗಳಿವೆ" ತನ್ನ ವರ್ಗದ ಜನರ ಕ್ರೌರ್ಯವನ್ನು ಬಯಲು ಮಾಡುತ್ತಾರೆ. ಪುರೋಹಿತ ವರ್ಗದ ಶೋಷಣೆಯ ವಿಡಂಬನೆ ಹಾಗೂ ದಲಿತರ ಬಗ್ಗೆ ಹೃದಯಂತರಾಳದ ಮನ ಪೂರ್ವಕವಾದ ಅನುಕಂಪವಿದೆ' ಎಂದಿದ್ದಾರೆ. ಈ ಹೇಳಿಕೆಯನ್ನು ಒಪ್ಪಿಯೂ ಕುವೆಂಪು ತಮ್ಮ ಅನುಭವದ ವ್ಯಾಪ್ತಿಗೆ ನಿಲುಕದ ರೀತಿಯಲ್ಲಿ ಸುಧಾರಣಾವಾದಿ ಸಮಾಜದ ಸೃಷ್ಟಿಗೆ ನಾಯಿಗುತ್ತಿ, ತಿಮ್ಮಿ ಐತ–ಪೀಂಚಲು ದರ್ಶನ ಧ್ವನಿಯಾಗಿ ಕಾಣುತ್ತಾರೆ. ಮನುಷ್ಯ ಚೇತನದ ನಿರಂತರ ಉದ್ಧಾರದ ಹಾದಿಯಲ್ಲಿ ಈ ಪಾತ್ರಗಳು ಕಾಣುತ್ತವೆ. ಪುರೋಹಿತಶಾಹಿಯ ನಿರ್ಮೂಲನದೊಂದಿಗೆ ದಲಿತರ ಹಾಗೂ ಶೂದ್ರರ ಉತ್ಕರ್ಷವಾಗುತ್ತದೆ. ದಲಿತರ ವೇದನೆಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಸವರ್ಣೀಯರೇ ಅಸ್ಪೃಶ್ಯರಾಗುವ ಕಾಲ ಬಂದೀತು ಎಂಬುದು ಕುವೆಂಪು ಅವರ ಸ್ಪಷ್ಟ ನಿಲುವಾಗಿದೆ.